ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ತುಮಕೂರು

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ಡಾ. ಬಿ. ನಂಜುಂಡ ಸ್ವಾಮಿ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**TUMAKURU:** An Introducing Book on the Places in Karnataka that Played a Major Role in the Freedom Struggle, Written by Dr. B. Nanjunda Swamy, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಬಿ. ನಂಜುಂಡ ಸ್ವಾಮಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೮೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001



# ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೨ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಭಾರತ ದೇಶ ಸ್ವಾತಂತ್ರ್ಯವಾದದ್ದು ೧೯೪೭ ಆಗಸ್ಟ್ ೧೫ರಂದು. ಅಂದು ತುಂಬಾ ಸಂತೋಷದಿಂದ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದೆವು. ಮನೆಮನೆಗಳಲ್ಲಿ ಹಬ್ಬದ ಸಡಗರ ಸಂಭ್ರಮ. ಭಾರತಮಾತೆಯ ಭಾವಚಿತ್ರದ ಪೂಜೆ ರಾಷ್ಟ್ರಧ್ವಜ ವಂದನೆ, ಪ್ರಭಾತಫೇರಿ ಹೀಗೆ ಹಲವು ವಿಧವಾದ ಆಚರಣೆಯನ್ನು ಮಾಡಿ ಸಂಭ್ರಮಿಸಿದರು. ಆ ದಿನಗಳಲ್ಲಿ ರೇಡಿಯೋ, ಪತ್ರಿಕೆ ಮುಖಾಂತರ ಮಾಹಿತಿಯನ್ನು ತಿಳಿಯಬೇಕಾಗಿತ್ತು. ಈ ನಿಟ್ಟಿನಲ್ಲಿ ಲಕ್ಷಾಂತರ ಜನರ ಹೋರಾಟದಿಂದ ಕನಸ್ಸಿನಲ್ಲಿಯೂ ಕನವರಿಸುತ್ತಾ ಇದ್ದ ಸ್ವಾತಂತ್ರ್ಯವನ್ನು ಗಳಿಸಿದೆವು.

ಮನೆಮನೆಯಲ್ಲಿ ಮಕ್ಕಳಿಗೆ ಎಣ್ಣೆಸ್ನಾನ ಮಾಡಿಸಿ ಶುಭ್ರವಾದ ಬಟ್ಟೆಯನ್ನು ಧರಿಸಿ ಮಕ್ಕಳನ್ನು ಸಿದ್ಧಪಡಿಸಿದರಂತೆ ತಾಯಂದಿರು. ಮಕ್ಕಳಿಗೆ ತಮ್ಮ ದಾಸ್ಯ ಕಳೆದು ಸ್ವತಂತ್ರವಾದೆವು ಎಂದು ಸಂತೋಷಪಟ್ಟು ಸಡಗರ ಸಂಭ್ರಮದಿಂದ ಹಬ್ಬದೂಟವನ್ನು ಮಾಡಿದರಂತೆ. ಗುಬ್ಬಿ ವೆಸ್ಲಿಯನ್ ಮಿಶನರಿ ಶಾಲೆಯಲ್ಲಿ ಶಿಕ್ಷಕರಾಗಿದ್ದ ಬಿ. ಶಿವಮೂರ್ತಿಶಾಸ್ತ್ರಿಗಳು ಪಾದ್ರಿಗೆ ಕನ್ನಡ ಪಾಠ ಹೇಳಲು ಗಾಂಧಿ ಟೋಪಿ ಧರಿಸಿ ಹೋಗಿದ್ದಕ್ಕೆ ಅಲ್ಪ ಮೊತ್ತದ ಸಂಬಳದ ಶಿಕ್ಷಕ ಕೆಲಸಕ್ಕೆ ರಾಜೀನಾಮೆ ಕೊಟ್ಟ ಪ್ರಸಂಗ ಹೃದಯಸ್ಪರ್ಶಿ ಆಗಿದೆ.

ಡಾ. ಟಿ. ಎಸ್. ಮಲ್ಲಿಕಾರ್ಜುನಯ್ಯನವರು ದಾಖಲಿಸಿರುವಂತೆ ಆಗಸ್ಟ್ ೧೯, ೧೯೪೨ರಂದು ಶವಪಟ್ಟಿಗೆಯಲ್ಲಿ ಯೂನಿಯನ್ ಜಾಕ್ ಬಾವುಟದ ಪ್ರತಿಯನ್ನು ತಲೆಕೆಳಗಾಗಿ ಕಟ್ಟಿ ಬ್ರಿಟಿಷ್ ಸಾಮ್ರಾಜ್ಯ ಸತ್ತಿತ್ತು ಮುಂತಾದ ಘೋಷಣೆಗಳನ್ನು ಕೂಗಿ ಸಾರ್ವಜನಿಕರಿಗೆ ತಿಳಿಯುವಂತೆ ನಾಲ್ಕು ಜನ ವಿದ್ಯಾರ್ಥಿಗಳು ಶವಪೆಟ್ಟಿಗೆಯನ್ನು ಹೊತ್ತುಕೊಂಡು ರಸ್ತೆ ಮಧ್ಯೆ ಬೆಂಕಿ ಇಟ್ಟು

ಅಂತ್ಯಕ್ರಿಯೆ ಮಾಡಿದರು. ಈ ಘಟನೆ ಹಿಂದೆ ಖ್ಯಾತ ಕಾದಂಬರಿಕಾರ ತ.ರಾ.ಸು. ಅವರು ಇದ್ದರು. ಅದೇ ದಿನ ಪೊಲೀಸರು ೯೦ ಜನರನ್ನು ಬಂಧಿಸಿದರಂತೆ. ಆ ವಿದ್ಯಾರ್ಥಿಗಳಲ್ಲಿ ಯಮಧೈರ್ಯ ಇದ್ದಿದರಿಂದ ಸರ್ಕಾರದ ಪೊಲೀಸ್ ಭಯಕ್ಕೆ ಹೆದರದೆ ಇಷ್ಟು ಧೈರ್ಯವಾಗಿ ಅಣಕು ಶವಯಾತ್ರೆ ಮಾಡುವ ನಿರ್ಧಾರ ತೆಗೆದು ಕೊಂಡಿದ್ದು. ರಾಜ್ಯ ಸರ್ಕಾರ, ಕೇಂದ್ರ ಸರಕಾರ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಶಾಸನ ಕೊಟ್ಟು ಗೌರವಿಸಿತು.

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಈ ಪುಸ್ತಕ ಬರೆಯುವುದಕ್ಕೆ ಅವಕಾಶ ಮಾಡಿಕೊಟ್ಟವರು ಸ್ನೇಹಿತರಾದ ಡಾ. ಮೃತ್ಯುಂಜಯ ರುಮಾಲೆ ಅವರು. ಕೃತಿಯನ್ನು ಪ್ರಕಟಿಸುತ್ತಿರುವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ. ವಸಂತಕುಮಾರ ಅವರಿಗೆ, ರಿಜಿಸ್ಟ್ರಾರ್ ಶ್ರೀ ಕರಿಯಪ್ಪ ಅವರಿಗೆ ವಂದನೆಗಳು. ನನಗೆ ಬೇಕಾದ ಪುಸ್ತಕಗಳನ್ನು ನೀಡಿದವರು ಸ್ನೇಹಿತರಾದ ಶ್ರೀ ಎಂ.ಎಚ್.ನಾಗರಾಜ್ ಮತ್ತು ಡಾ. ಡಿ.ಎನ್. ಯೋಗೀಶ್ವರಪ್ಪ ಅವರು. ಪ್ರೀತಿ ಅಭಿಮಾನದಿಂದ ಡಿ.ಟಿ.ಪಿ. ಮಾಡಿದವರು ಬೆಳಗಾವಿಯ ಪ್ರಕಾಶ ಗಿರಿಮಲ್ಲನವರ ಈ ಎಲ್ಲಾ ಮಹನೀಯರಿಗೂ ವಂದನೆಗಳು.

**ಡಾ. ಬಿ. ನಂಜುಂಡ ಸ್ವಾಮಿ**

# ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟ ಮತ್ತು ತುಮಕೂರು | ೧೫ |
| ಮುನ್ನುಡಿ | ೨೬ |
| ಪರಾಮರ್ಶನ ಗ್ರಂಥಗಳು | ೫೧ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೨ |

# ಸ್ವಾತಂತ್ರ್ಯ ಹೋರಾಟ ಮತ್ತು ತುಮಕೂರು

ಪ್ರಪಂಚದ ಇತಿಹಾಸದಲ್ಲಿ ಭಾರತ ದೇಶದ ಇತಿಹಾಸದ ಬಗ್ಗೆ ವಿಶ್ವ ಜನತೆಗೆ ಬಹಳ ಕುತೂಹಲ. ಈ ನಿಟ್ಟಿನಲ್ಲಿ ನಮ್ಮ ನೆಲದ ಶಿಲಾಶಾಸನಗಳು, ತಾಮ್ರ ಶಾಸನಗಳು, ಕೋಟೆ ಕೊತ್ತಳಗಳು, ದೇವಾಲಯಗಳು, ಸ್ಮಾರಕ ಮಂದಿರಗಳು, ಶಿಲಾವಿಗ್ರಹ, ಲೋಹವಿಗ್ರಹಗಳು, ಕಾಗದ ಪತ್ರಗಳು, ಓಲೆಗರಿ ಕಟ್ಟುಗಳು ಕಡತಗಳು, ಮುದ್ರಿತ ಪುಸ್ತಕಗಳು ಹೀಗೆ ಮನುಷ್ಯನ ಬುದ್ಧಿಗೆ ನಿಲುಕುವ ಎಲ್ಲಾ ವಿಧವಾದ ಪರಿಕರಗಳನ್ನು ಉಪಯೋಗಿಸಿಕೊಂಡು ಇತಿಹಾಸವನ್ನು ರಚನೆ ಮಾಡುತ್ತ ಬರಲಾಗಿದೆ. ಬ್ರಿಟಿಷರ ವಿರುದ್ಧ ಅಹಿಂಸಾ ತತ್ವ ಮೂಲಕ ಹೋರಾಟ ಮಾಡಿ ಸ್ವಾತಂತ್ರ್ಯ ಪಡೆಯಲು, ಹೋರಾಟಗಾರರು, ವಿದ್ಯಾರ್ಥಿಗಳು, ರೈತರು, ಕಾರ್ಮಿಕರು, ಜನಸಾಮಾನ್ಯರು, ಸರಕಾರಿ ನೌಕರರು ತಮ್ಮ ಕೈಲಾದ ಸಹಾಯವನ್ನು ಮಾಡಿದ್ದಾರೆ. ಇದರಲ್ಲಿ ಹೆಣ್ಣು–ಗಂಡು ಭೇದವಿಲ್ಲದೆ ದುಡಿದಿದ್ದಾರೆ. ಆ ಎಲ್ಲಾ ಮಹನೀಯರ ಹೋರಾಟವನ್ನು ಈ ಪುಸ್ತಕದಲ್ಲಿ ದಾಖಲಿಸಲು ಸಾಧ್ಯವಾಗುವುದಿಲ್ಲ. ಅಂದಿನ ಹೋರಾಟದ ಒಂದು ಪಕ್ಷಿನೋಟವನ್ನು ಈ ಪುಸ್ತಕದಲ್ಲಿ ದಾಖಲಿಸಲು ಪ್ರಯತ್ನಿಸುತ್ತೇನೆ. ಕರ್ನಾಟಕ ರಾಜ್ಯದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಟ್ಟ ಪ್ರಪ್ರಥಮ ದಾಖಲೆ ಸಿಕ್ಕುವುದು ಆರ್. ಎಸ್. ಡಾಬ್ಸ್‌ರವರ Reminiscences of Life In Mysore South Africa and Burmah By Major General R. S. Dobbs- 1882 ಎಂಬ ಜೀವನ ಚರಿತ್ರೆಯಲ್ಲಿ.

ಚಿತ್ರದುರ್ಗ ಕೊನೆಯ ಪಾಳೆಯಗಾರ ಮೆದಕರಿ ನಾಯಕನನ್ನು ಯುದ್ಧದಲ್ಲಿ ಸೋಲಿಸಿ ಅವರ ಆಡಳಿತವನ್ನು ಕಿತ್ತುಕೊಂಡವನು ಹೈದರಾಲಿ. ಚಿತ್ರದುರ್ಗ ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟ ಒಟ್ಟು ಪ್ರದೇಶವನ್ನು ಹೈದರಾಲಿ ತನ್ನ

ವಶಕ್ಕೆ ತೆಗೆದುಕೊಂಡನು. ಚಿತ್ರದುರ್ಗ ಪಾಳೆಯಗಾರರ ವಂಶಸ್ಥರು ಚದುರಿ ಹೋದರು. ಬ್ರಿಟಿಷರು ಮೈಸೂರು ರಾಜ್ಯದ ಆಡಳಿತವನ್ನು ನೇರವಾಗಿ ತಮ್ಮ ಕೈಗೆ ತೆಗೆದುಕೊಂಡಿದ್ದು ಕ್ರಿ.ಶ. ೧೮೩೧ರಲ್ಲಿ. ಆ ಸಮಯದಲ್ಲಿ ಮೈಸೂರಿನಲ್ಲಿ ಇದ್ದ ಎಲ್ಲಾ ಪಾಳೆಯಗಾರರನ್ನು ಬೆಂಗಳೂರಿಗೆ ಸ್ಥಳಾಂತರಿಸಲಾಯಿತು. ಈ ಸ್ಥಳಾಂತರ ಪಾಳೆಯಗಾರರಿಗೆ ಇಷ್ಟವಿರಲಿಲ್ಲ.

೧೮೪೯ರಲ್ಲಿ ಚಿತ್ರದುರ್ಗ ಪಾಳೆಯಗಾರರ ವಂಶಕ್ಕೆ ಸೇರಿದ ಏಳು ಜನ ಬ್ರಿಟಿಷ್ ಸರಕಾರದ ಮೇಲೆ ತಿರುಗಿ ಬಿದ್ದು ಅವರನ್ನು ಭಾರತ ದೇಶದಿಂದಲೇ ಓಡಿಸಲು ನಿರ್ಧರಿಸಿದರು. ಈ ಹಿಂದೆ ಯುದ್ಧ ಮಾಡಿದ ವೀರಯೋಧರ ವಂಶಸ್ಥರು, ಕೈಯಲ್ಲಿ ಕೆಲಸವಿಲ್ಲದೆ ಬೇಸಾಯ ಮಾಡಿಕೊಂಡು ಇದ್ದರು. ಇವರನ್ನೆಲ್ಲಾ ಒಂದುಗೂಡಿಸಿ ಬ್ರಿಟಿಷರ ಮೇಲೆ ಯುದ್ಧ ಮಾಡಲು ನಿರ್ಧರಿಸಿದರು. ಐವತ್ತು ಜನ ಬಲಾಢ್ಯ ಬೇಡ ಜನಾಂಗ ನಾಯಕರು ಬೆಂಗಳೂರಿನಿಂದ ತಪ್ಪಿಸಿಕೊಂಡು ಚಿತ್ರದುರ್ಗ ದೊಡ್ಡೇರಿ ತಲುಪಿದರು. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಈ ವಿಷಯ ಸರಿಯಾಗಿ ದಾಖಲಾಗಿಲ್ಲ. ಈ ಘಟನೆ ಬಗ್ಗೆ ವಿವರವಾದ ಮಾಹಿತಿ ಕ್ರಿ.ಶ. ೧೯೨೦ರ ತನಕ ದೊರೆಯುತ್ತಿತ್ತು. ಸ್ಥಳೀಯ ಇತಿಹಾಸಜ್ಞರು ಸ್ವಲ್ಪ ಶ್ರಮ ವಹಿಸಿದ್ದರೆ ಈ ಘಟನೆ ಬಗ್ಗೆ ವಿವರವಾಗಿ ಬರೆದಿದ್ದರೆ, ಭಾರತೀಯರ ಸ್ವಾತಂತ್ರ್ಯ ಇತಿಹಾಸಕ್ಕೆ ಈ ದೊಡ್ಡ ಘಟನೆ ದಾಖಲಾಗ ಬೇಕಾಗಿತ್ತು. "ಸಿಪಾಯಿ ದಂಗೆ" ನಡೆದದ್ದು ೧೮೫೭ರಲ್ಲಿ ಬ್ರಿಟಿಷರ ವಿರುದ್ಧ ಚಿತ್ರದುರ್ಗ ಪಾಳೆಯಗಾರ ವಂಶಸ್ಥರ ಹೋರಾಟ ನಡೆದದ್ದು.. ೧೮೪೯ರಲ್ಲಿ, ಮೇಜರ ಡಾಬ್ಸ್‌ರವರು ತಮ್ಮ ಪುಸ್ತಕದಲ್ಲಿ ಕೊಟ್ಟ ಮಾಹಿತಿಯನ್ನು ಯಥಾವತ್ತಾಗಿ ನನ್ನ ಲೇಖನದಲ್ಲಿ ಕೊಟ್ಟಿದ್ದೇನೆ.

ಕೊಪ್ಪಳ ಗವಿಸಿದ್ಧೇಶ್ವರ ಮಹಾವಿದ್ಯಾಲಯದ ಆಶ್ರಯದಲ್ಲಿ ೨೦೧೭ ಅಕ್ಟೋಬರ್ ೨೮, ೨೯, ೩೦ರಂದು ನಡೆದ ಕರ್ನಾಟಕ ಇತಿಹಾಸ ಅಕಾಡೆಮಿ ವಾರ್ಷಿಕ ಸಮ್ಮೇಳನದಲ್ಲಿ ಆರ್. ಎಸ್. ಡಾಬ್ಸ್‌ರವರ ಜೀವನ ಚರಿತ್ರೆಯಲ್ಲಿ ತುಮಕೂರು ಚಿತ್ರದುರ್ಗ ಜಿಲ್ಲೆ ಇತಿಹಾಸ ಲೇಖನವನ್ನು ಮಂಡಿಸಿದೆ. ಈ ಲೇಖನ ಇತಿಹಾಸ ದರ್ಶನ ೨೦೧೮ ಸಂಪುಟ ೩೩ ರಲ್ಲಿ ಪು. ೪೮೮–೪೯೫. ಆಸಕ್ತರು ಪರಾಂಬರಿಸಬೇಕಾಗಿ ವಿನಂತಿ.



ಗಾಂಧೀಜಿಯವರು ಸುಮಾರು ಇಪ್ಪತ್ತು ವರ್ಷಗಳ ಕಾಲ ದಕ್ಷಿಣ ಆಫ್ರಿಕಾದಲ್ಲಿನ ವರ್ಣಭೇದ ನೀತಿ ವಿರುದ್ಧ ನಡೆಸಿದ ಹೋರಾಟದಲ್ಲಿ ಯಶಸ್ವಿಯಾಗಿ ೧೯೧೫ ಜನವರಿ ೯ರಂದು ಭಾರತ ದೇಶಕ್ಕೆ ಮರಳಿದರು. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ನಡೆಸಿದ ಅಪೂರ್ವ ಸತ್ಯಾಗ್ರಹವನ್ನು ವಿಶೇಷವಾಗಿ ಮೆಚ್ಚಿಕೊಂಡ ಸೌರಾಷ್ಟ್ರದ ಗೊಂಡಾಲ ಸಂಸ್ಥಾನದ ಮಹಾರಾಜನಾದ ಠಾಕೂರ್ ಸಾಹೇಬರು ರಾಜಧಾನಿ ಗೊಂಡಾಲದಲ್ಲಿ ೨೭–೧–೧೯೧೫ ಬುಧವಾರದಂದು ಗಾಂಧೀಜಿಯವರನ್ನು ಸನ್ಮಾನಿಸಿ "ಮಹಾತ್ಮ" ಬಿರುದನ್ನು ನೀಡಿ ಗೌರವಿಸಿದರು. ಅಂದಿನಿಂದ ಗಾಂಧೀಜಿಯನ್ನು ಮಹಾತ್ಮ ಎಂದು ಸಂಬೋಧಿಸುವುದು ರೂಢಿಗೆ ಬಂದಿತು.

ಗಾಂಧೀಜಿಯವರು ತಮ್ಮ ರಾಜಕೀಯ ಗುರುಗಳಾಗಿದ್ದ ಗೋಪಾಲ ಕೃಷ್ಣ ಗೋಖಲೆಯವರ ಮಾರ್ಗದರ್ಶನದಲ್ಲಿ ದೇಶಸೇವೆ ಮಾಡಲು ಸಿದ್ಧರಾದರು. ಗಾಂಧೀಜಿಯವರು ಪುಣೆಗೆ ಹೋಗಿ ಗೋಖಲೆ ಅವರನ್ನು ಭೇಟಿಯಾದರು. ಮಾತೃಭೂಮಿಗಾಗಿ ನಿಸ್ವಾರ್ಥ ಸೇವೆ ಸಲ್ಲಿಸುವಂತಹ ತರುಣರನ್ನು ತರಬೇತಿಗೊಳಿಸುವುದಕ್ಕಾಗಿ "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ"ಯನ್ನು ಗೋಖಲೆಯವರು ಸ್ಥಾಪಿಸಿದ್ದರು. ಗಾಂಧೀಜಿಯವರಲ್ಲಿ ಸುಪ್ತವಾಗಿದ್ದ ಅಪಾರ ಶಕ್ತಿಯನ್ನು ಮನಗಂಡಿದ್ದ ಗೋಖಲೆಯವರು ಗಾಂಧೀಜಿಯವರಿಗೆ "ನೀನು ಭಾರತದ ಸಲುವಾಗಿ ಮಹತ್ಕಾರ್ಯಗಳನ್ನು ಸಾಧಿಸಬೇಕಾಗಿರುವುದರಿಂದ ಮೊದಲು ಒಂದು ವರ್ಷ ಪೂರ್ತಿ ಇಡೀ ಭಾರತದಲ್ಲಿ ಪ್ರವಾಸ ಮಾಡಿ ದೇಶದ ಪರಿಸ್ಥಿತಿಯನ್ನು ಅರಿತ ನಂತರ ಸಾರ್ವಜನಿಕ ಕಾರ್ಯ ಪ್ರಾರಂಭಿಸು" ಎಂದು ಸಲಹೆ ಕೊಟ್ಟರು. ಗೋಖಲೆಯವರು ೧೯೧೫ ಫೆಬ್ರವರಿ ೧೯ರಂದು ದಿವಂಗತರಾದರು. ಬೆಂಗಳೂರು ನಗರದಲ್ಲಿ ೧೯೧೫ ಫೆಬ್ರವರಿ ೨೫ರಂದು ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿತ್ತು. ಅಂದಿನ ದಿವಾನ್‌ರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ಮತ್ತು ಇತರೆ ರಾಷ್ಟ್ರೀಯ ನಾಯಕರು ಮಾಡಿದ ಭಾಷಣಗಳಿಂದ ಪ್ರೇರಣೆಗೊಂಡು ಬೆಂಗಳೂರಿನ ತರುಣರ ತಂಡವು ಗೋಖಲೆಯವರ ಆದರ್ಶಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ನಿರ್ಧರಿಸಿ ಡಿ.ವಿ. ಗುಂಡಪ್ಪನವರ ನೇತೃತ್ವದಲ್ಲಿ "ಮೈಸೂರು ಸೋಷಿಯಲ್ ಸರ್ವಿಸ್

ಲೀಗ್" ಅಥವಾ "ಮೈಸೂರು ದೇಶ ಸೇವಾಸಂಘ" ಹೆಸರಿನ ಒಂದು ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು.

ಗಾಂಧೀಜಿಯವರು ಗೋಖಲೆಯವರ ಮಾತಿನ ಮೇರೆಗೆ ಪ್ರವಾಸ ಕೈಗೊಂಡು ಕಸ್ತೂರಿಬಾ ಅವರೊಡನೆ ೧೯೧೫ ಏಪ್ರಿಲ್‌ನಲ್ಲಿ ಮದ್ರಾಸಿಗೆ ಆಗಮಿಸಿದರು. ಆಗ ಮದ್ರಾಸಿನ ಪ್ರಸಿದ್ಧ ಲೇಖಕ, ಪ್ರಕಾಶಕ ಹಾಗೂ ಪತ್ರಕರ್ತರಾದ ಜಿ.ಎ.ನಟೇಶನ್ ಅವರ ಸಹಕಾರದಿಂದ ಗಾಂಧೀಜಿಯವರನ್ನು ಬೆಂಗಳೂರಿಗೆ ಕರೆಯಿಸಿ "ಮೈಸೂರು ದೇಶ ಸೇವಾಸಂಘ"ವನ್ನು ಅವರಿಂದಲೇ ಉದ್ಘಾಟಿಸಬೇಕು ಎಂದು ಡಿ.ವಿ. ಗುಂಡಪ್ಪನವರ ಅಭಿಲಾಷೆ. ಈ ಎಲ್ಲಾ ಮಹನೀಯರ ಕೋರಿಕೆಯಂತೆ ಗಾಂಧೀಜಿಯವರು ತಮ್ಮ ಪ್ರವಾಸ ಕಾರ್ಯಕ್ರಮವನ್ನು ಮುಂದೂಡಿ ೧೯೧೫ ಮೇ ೮ರಂದು ಬೆಂಗಳೂರಿಗೆ ಬರಲು ಒಪ್ಪಿಕೊಂಡರು.

೧೯೧೫ ಮೇ ೩ನೇ ತಾರೀಖು ಕರ್ನಾಟಕ ಸಾಹಿತ್ಯ ಪರಿಷತ್ತಿನ ಉದ್ಘಾಟನೆ ೪, ೫, ೬ನೇ ತಾರೀಖು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದು ಅಖಿಲ ಭಾರತ ಮಟ್ಟದಲ್ಲಿ ಎಲ್ಲರೂ ಬೆಕ್ಕಸ ಬೆರಗಾಗಿ ನೋಡುವಂತಹ ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾಯಿತು. ಈ ಸಮ್ಮೇಳನಕ್ಕೆ ಆಗಮಿಸಿದ್ದ ಬಹಳಷ್ಟು ಪ್ರತಿನಿಧಿಗಳು ಇದೇ ಸ್ಥಳಕ್ಕೆ ಎಂಟರಂದು ಗಾಂಧೀಜಿಯವರು ಬರುವರೆಂದು ತಿಳಿದು ಅವರನ್ನು ಕಾಣಬೇಕೆಂದು ತಮ್ಮ ಪ್ರಯಾಣವನ್ನು ಮುಂದೂಡಿ ಬೆಂಗಳೂರಿನಲ್ಲೇ ಉಳಿದರು.

ಈಗಿನ ಬೆಂಗಳೂರು ಸರ್ಕಾರಿ ಕಲಾ ಕಾಲೇಜಿನ ವಿಶಾಲವಾದ ಸಭಾಂಗಣದಲ್ಲಿ ಮೇ ೮, ೧೯೧೫ ಶನಿವಾರ ಬೆಳಿಗ್ಗೆ ೯ ಗಂಟೆಗೆ ಗಾಂಧೀಜಿಯವರ ಪ್ರಥಮ ಸಾರ್ವಜನಿಕ ಕಾರ್ಯಕ್ರಮ "ಮೈಸೂರು ದೇಶ ಸೇವಾ ಸಂಘ"ದ ಉದ್ಘಾಟನೆಯನ್ನು ಗೋಪಾಲಕೃಷ್ಣ ಗೋಖಲೆಯವರ ಭಾವಚಿತ್ರ ಅನಾವರಣ ಮೂಲಕ ಮಾಡಬೇಕೆಂದು ಏರ್ಪಡಿಸಲಾಗಿತ್ತು. ದಾವಣಗೆರೆಯಿಂದ ಹರ್ಡೇಕರ ಮಂಜಪ್ಪನವರು, ಮೈಸೂರಿನಿಂದ ವೆಂಕಟ ಕೃಷ್ಣಯ್ಯನವರು ಬಂದಿದ್ದರು. ನಿವೃತ್ತ ದಿವಾನರಾಗಿದ್ದ ಟಿ. ಅನಂತರಾಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಬಳ್ಳಾರಿ ಟಿ.



ರಾಘವರು ರವೀಂದ್ರನಾಥ ಠಾಕೂರರ "ಗೀತಾಂಜಲಿ"ಯಿಂದ ಆಯ್ದು ಕೆಲವು ಇಂಗ್ಲಿಷ್ ಕವನಗಳು ಮತ್ತು ಸಂಸ್ಕೃತ ಶ್ಲೋಕಗಳನ್ನು ಪ್ರಾರ್ಥನಾ ರೂಪದಲ್ಲಿ ಹಾಡಿದರು. ಡಿ.ವಿ.ಗುಂಡಪ್ಪನವರು ಸ್ವಾಗತ ಭಾಷಣ ಮಾಡಿ ಇಂಗ್ಲಿಷಿನಲ್ಲಿ ವಿಜ್ಞಾಪನಾ ಪತ್ರವನ್ನು ಅರ್ಪಿಸಿದರು. ತದನಂತರ ಕೆ.ಪಿ.ಪುಟ್ಟಣಶೆಟ್ಟರು ಗಾಂಧೀಜಿ ಅವರ ಸರಳ ಜೀವನವನ್ನು ಕುರಿತು ವಿವರವಾಗಿ ಸಭಿಕರಿಗೆ ತಿಳಿಸಿದರು. ಗಾಂಧೀಜಿಯವರು ನೆರೆದಿದ್ದ ಮಹಾಜನತೆಯನ್ನು ಕುರಿತು ಈ ರೀತಿ ಮಾತನಾಡಿದರು.

ರಾಜಕೀಯದಲ್ಲಿ ಗೋಖಲೆಯವರು ನನ್ನ ಗುರುಗಳು ಎಂದು ತಿಳಿಸಿದ್ದೇನೆ. ರಾಜಕೀಯ ಗುರುಗಳು ಎಂದು ಹೇಳುತ್ತೇನೆ. ಭಾರತೀಯರೆಲ್ಲರ ಮುಂದೆಯೂ ಈ ಮಾತನ್ನು ಹೇಳುತ್ತೇನೆ. ೧೮೯೬ರಲ್ಲೇ ಈ ಘೋಷಣೆ ಮಾಡಿದ್ದೆ...ಗೋಖಲೆಯವರಲ್ಲಿ ಅಹಂಕಾರ ಎಂಬುದು ಲವಲೇಶವೂ ಇರಲಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಹೆಸರು ಪಡೆಯಬೇಕು, ಕೀರ್ತಿ ಗಳಿಸಬೇಕು ಎಂದು ಅವರಿಗೆ ಆಸೆ ಇರಲಿಲ್ಲ. ಸ್ವಲಾಭಕ್ಕಾಗಿ, ಸ್ವಪ್ರತಿಷ್ಠೆಗಾಗಿ ಎಂದೂ ಅವರು ಪ್ರಯತ್ನಿಸಿದವರೇ ಅಲ್ಲ. ದೇಶಕ್ಕೆ ಲಾಭ ಬರಲಿ ಎಂಬುದೇ ಅವರ ಬಯಕೆ; ತಮ್ಮೊಳಗೆ ಅಡಗಿದ್ದ ಸದ್ಗುಣ ಒಂದೊಂದನ್ನು ಬೆಳೆಸಿ ಕೊಳ್ಳಲು ಅವರು ಪ್ರಯತ್ನಿಸಿದರು. ದೇಶ ತನ್ನಿಂದ ಪ್ರಯೋಜನ ಪಡೆಯಲಿ ಎಂಬುವೇ ಅವರ ಹೆಬ್ಬಯಕೆಯಾಗಿತ್ತು. ಜನರ ಮೆಚ್ಚುಗೆ ಅಥವಾ ಶಹಭಾಷ್‌ಗಿರಿ ಅವರಿಗೆ ಬೇಕಾಗಿರಲಿಲ್ಲ. ಅದಕ್ಕೆ ಆಸೆ ಪಡಲೂ ಇಲ್ಲ. ಆದರೆ ಕೀರ್ತಿ ಮೆಚ್ಚುಗೆಯನ್ನು ಜನರು ಅವರ ಮೇಲೆ ಹರಿಸಿದರು. ದೇಶಕ್ಕೆ ಪ್ರಯೋಜನ ಆಗಲಿ ಎಂದು ಎಲ್ಲಕ್ಕೂ ಅವರು ತಲೆಕೊಟ್ಟರು. ಅವರು ನಮಗೆ ಕೊಟ್ಟ ಉತ್ಸಾಹ ಮತ್ತು ಉತ್ತೇಜನ ಇದೇ ಎಂದು ಹೇಳಿ ಅತ್ಯಂತ ಭಕ್ತಿ ಗೌರವದಿಂದ ಈ ಭಾವಚಿತ್ರವನ್ನು ಅನಾವರಣ ಮಾಡುತ್ತೇನೆ ಎಂದರು.

ಈಗಲೂ ಅಂದು ಗಾಂಧೀಜಿಯವರು ಅನಾವರಣ ಮಾಡಿದ ಗೋಖಲೆಯವರ ಭಾವಚಿತ್ರ ನರಸಿಂಹರಾಜ ಕಾಲೋನಿಯಲ್ಲಿರುವ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಇದೆ. ಈ ಕಾರ್ಯಕ್ರಮ ನಡೆದ ಸರ್ಕಾರಿ ಕಲಾ ಕಾಲೇಜಿನ ಸಭಾಂಗಣಕ್ಕೆ "ಬಾಪೂಜಿ ಸಭಾಂಗಣ" ಎಂದು ಇಟ್ಟ ಹೆಸರು

ಹಾಗೇ ಉಳಿದಿದೆ. ಅಂದಿನ ಮೈಸೂರು ರಾಜ್ಯಕ್ಕೆ ಗಾಂಧೀಜಿಯ ಮೊದಲ ಭೇಟಿ ಈ ಕಾರ್ಯಕ್ರಮದ ನಂತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ ತೀವ್ರವಾಯಿತು.

ಆಸ್ಥಾನ ವಿದ್ವಾನ್, ಪಂಡಿತರತ್ನಂ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ತಮ್ಮ ಸಂಕ್ಷಿಪ್ತ ಆತ್ಮಕತೆಯನ್ನು ೧೯೭೪ರಲ್ಲಿ ಬರೆದಿದ್ದಾರೆ. ಈ ಕೃತಿಯಲ್ಲಿ ಆ ಕಾಲದ ಸ್ವಾತಂತ್ರ್ಯ ಸಂಗ್ರಾಮ ಕುರಿತು ಕೆಲವು ಮಹತ್ವದ ವಿಚಾರಗಳನ್ನು ಹೀಗೆ ನೆನಪಿಸಿಕೊಳ್ಳುತ್ತಾರೆ. "...ಆಗ ದೇಶದಲ್ಲಿ ಸ್ವಾತಂತ್ರ್ಯ ಚಳವಳಿ, ಕರ್ನಾಟಕ ಏಕೀಕರಣ ಚಳವಳಿ ಇವು ಜತೆಜತೆಯಲ್ಲೆ ಸಾಗುತ್ತಿದ್ದವು. ಈ ಕಾಲದಲ್ಲಿ ತುಮಕೂರಿಗೆ ಬಂದು ಹೋದ ಕಡಪ ರಾಘವೇಂದ್ರರಾಯರು, ಕೊಪ್ಪಳ ಜಯರಾಮಾಚಾರ್ಯರು, ದೇಶಪಾಂಡೆ ಗಂಗಾಧರರಾಯರು, ಹರ್ಡೇಕರ ಮಂಜಪ್ಪನವರು, ಮುದವೀಡು ಕೃಷ್ಣರಾಯರು, ಆಲೂರು ವೆಂಕಟರಾಯರು ಮೊದಲಾದ ಮಹನೀಯರ ಪರಿಚಯವುಂಟಾಯಿತು. ....ಮಹಾತ್ಮ ಗಾಂಧೀಜಿಯವರು, ಸಿ. ರಾಜಗೋಪಾಲಾಚಾರಿಯವರು ಮಹದೇವ ದೇಸಾಯಿ ಕೂಡ ತುಮಕೂರಿಗೆ ಸಂದರ್ಶನವಿತ್ತಿದ್ದರು. ದಿನವೂ ನಾನು ಗಾಂಧೀಯವರ ಭಾಷಣವನ್ನು ಕೇಳಲು ಹೋಗುತ್ತಿದ್ದೆನು. ಅವರ ಸರಳ ಹಿಂದೀ ಭಾಷಣಗಳು ಸುಲಭ ಶೈಲಿಯಲ್ಲಿದ್ದುದರಿಂದ ನನಗೆ ಬರುತ್ತಿದ್ದ ಹಿಂದೀ ಭಾಷಾಜ್ಞಾನವು ಅವುಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಯಿತು. ಆ ಸಂದರ್ಭದಲ್ಲಿ "ಗಾಂಧಿ ಗೀತೆಗಳು" ಎಂಬ ಕವನ ಸಂಕಲನದ ಪುಸ್ತಕವನ್ನು ಬರೆದು ಅವರಿಗೆ ಅರ್ಪಿಸಿದೆನು. ಗಾಂಧೀಯವರಿಗೆ ಕನ್ನಡ ಬರುತ್ತಿರಲಿಲ್ಲ. ಆದರೆ ೧೯೨೧ರಲ್ಲಿ ಮಹಾತ್ಮರು ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸಿದುದು ಸರಿಯಷ್ಟೇ? ಆಗ ನಮ್ಮೂರಿನ ಮುಖಂಡರಾಗಿದ್ದ ಕೆ. ರಂಗಯ್ಯಂಗಾರ್, ಟಿ. ಸುಬ್ರಹ್ಮಣ್ಯಂ ಮೊದಲಾದವರು ಪ್ರಾರಂಭಿಸಿದ ಸ್ವದೇಶಿ ಚಳವಳಿಯು ನನ್ನ ಮನಸ್ಸನ್ನು ಹಿಡಿಯಿತು. ಆ ಮಹನೀಯರು ಜಿಲ್ಲೆಯ ಎಲ್ಲಾ ಭಾಗಕ್ಕೆ ನನ್ನನ್ನು ಜತೆಯಲ್ಲಿ ಭಾಷಣಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಇದರಿಂದ ಜಿಲ್ಲೆಯಲ್ಲಿ ಜನಗಳ ಪರಿಚಯ ನನಗೆ ಹೆಚ್ಚಾಗಿ ಉಂಟಾಯಿತು.

....ಅದೇ ವರ್ಷ ಮದರಾಸಿನಲ್ಲಿ ಡಾ. ಅನ್ಸಾರಿಯವರ ಅಧ್ಯಕ್ಷತೆಯಲ್ಲಿ



ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ನಾನು ಹೋಗಿದ್ದೇನು. ಅಲ್ಲಿ ಪಂಡಿತ ನೆಹರು, ಸರೋಜಿನಿದೇವಿ, ಸರ್ದಾರ್ ಪಟೇಲ್ ಮೊದಲಾದವರ ದರ್ಶನ ಮಾಡಿದೆನು.

...ಗುಬ್ಬಿಯಲ್ಲಿ ೧೯೨೪–೧೯೨೬ ಈ ಎರಡು ವರ್ಷಗಳ ಕನ್ನಡ ಪಾಠ ಬೋಧಕನಾಗಿದ್ದೆನು. ಅದು ವೆಸ್ಲಿಯನ್ ಮಿಷನ್ ಸ್ಕೂಲ್. ಆ ಶಾಲೆಯ ಮೇಲು ವಿಚಾರಕರಾಗಿ ರೆ. ಬ್ಲೆಯ್ರಿ ಎಂಬ ಆಂಗ್ಲ ಪಾದರಿ ಇದ್ದರು. ಅವನು ಸ್ಕಾಟ್ಲೆಂಡಿನವನು. ಜರ್ಮನಿ ಮೊದಲನೆ ಯುದ್ಧಕ್ಕೆ ಹೋಗಿ ಬಂದಿದ್ದವನು. ಅವಿವಾಹಿತನು ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದನು.

ಗುಬ್ಬಿಯಲ್ಲಿದ್ದ ಎರಡು ವರ್ಷಗಳ ಕಾಲ ಈ ಪಾದ್ರಿಗೆ ಕನ್ನಡ ಪಾಠ ಹೇಳುತ್ತಿದ್ದೆನು. ಈ ಪಾಶ್ಚಾತ್ಯ ಪಾದ್ರಿಗಳಿಗೆ ಕನ್ನಡ ಮತ್ತು ಸಾಹಿತ್ಯವನ್ನು ಮೈಸೂರಿನಲ್ಲಿದ್ದ ನಮ್ಮ ಗುರುಗಳು ಆಸ್ಥಾನ ವಿದ್ವಾನ್ ಕರ್ನಾಟಕ ಭಾಷಾರತ್ನಂ ಪಿ. ಆರ್. ಕರಿಬಸವ ಶಾಸ್ತ್ರಿಗಳು ನಡೆಸುತ್ತಿದ್ದರು. ಅದೇ ಸಂಪ್ರದಾಯ ನನ್ನನ್ನು ಬೆನ್ನು ಹತ್ತಿತು. ತುಮಕೂರಿನಲ್ಲಿದ್ದ ರೆ. ಪೆನ್ಸರ್, ರೆ. ಥಾಮಸನ್ ಮಹಾಶಯರು ನಮ್ಮ ಗುರುಗಳಲ್ಲಿ ಕನ್ನಡವನ್ನು ಅಭ್ಯಾಸ ಮಾಡಿದವರು. ಅವರ ಶಿಫಾರಸ್ಸಿನ ಪ್ರಕಾರ ಗುಬ್ಬಿಯಲ್ಲಿದ್ದ ರೆ.ಬ್ಲೆಯ್ರಿ ಮಹಾಶಯರಿಗೆ ನಾನು ಕನ್ನಡವನ್ನು ಹೇಳಬೇಕಾದ ಪ್ರಸಂಗ ಬಂದಿತು. ಸುಮಾರು ಎರಡು ವರ್ಷಗಳ ಜಾಲ ಅವರ ಸಂಸರ್ಗದಿಂದ ಕೆಲವು ಹೊಸ ಪಾಠಗಳನ್ನು ಕಲಿತೆನು. ನನ್ನಿಂದ ಆ ಪಾದ್ರಿಯು ಸ್ವಲ್ಪ ಮಟ್ಟಿಗೆ ಕನ್ನಡವನ್ನು ಕಲಿತನು. ಆಗಾಗ್ಗೆ ಮಾತನಾಡುವಾಗ ಅವನು ಇಂಗ್ಲಿಷ್ ಜನರ ಭಾವನೆಗಳನ್ನು ಜರ್ಮನ್ ಯುದ್ಧದ ಅನುಭವಗಳನ್ನು ನನಗೆ ಹೇಳುತ್ತಿದ್ದನು. ನಾನು ಭಾರತ ದೇಶದ ಅರಸರಲ್ಲಿ ಕರ್ನಾಟಕದ ಚರಿತ್ರೆಯನ್ನು ಅವರಿಗೆ ಅನುಭವ ಮಾಡಿಕೊಡುತ್ತಿದ್ದೆನು.

....ಒಂದು ದಿನ ಸಾಹೇಬರ ಬಂಗಲೆಗೆ ಪಾಠ ಹೇಳಲು ಹೋಗುವಾಗ ನಾನು ಗಾಂಧಿ ಟೋಪಿ ಹಾಕಿಕೊಂಡು ಹೋದೆನು. ಆ ಪಾದ್ರಿಗೆ ಗಾಂಧಿ ಹೆಸರು ಕೇಳಿದರೆ ಆಗುತ್ತಿರಲಿಲ್ಲ. ಅವನು ಇಂಗ್ಲಿಷ್‌ರ ಶತ್ರು ಎಂದು ಹೇಳುತ್ತಿದ್ದನು. ಆಗ ಸಾಹೇಬರು ನನ್ನನ್ನು ನೋಡಿ ಇನ್ನು ಮೇಲೆ ನಮ್ಮ ಬಂಗಲೆಗೆ ಬರುವಾಗ

ಗಾಂಧಿ ಟೋಪಿ ಹಾಕಬಾರದು, ಅವನು ಇಂಗ್ಲಿಷ್ ಜನರ ಶತ್ರು, ನಮ್ಮನ್ನು ಇಂಡಿಯಾ ದೇಶದಿಂದ ಓಡಿಸಬೇಕೆಂದು ಚಳವಳಿ ಮಾಡುತ್ತಿದ್ದಾನೆ. ನೀವು ಗಾಂಧೀ ಭಕ್ತರಾದರೆ ನಮ್ಮ ಸ್ಕೂಲಿನಿಂದ ವಜಾ ಮಾಡುತ್ತೇನೆ ಎಂದು ಹೇಳಿದರು. ಅವರ ಮಾತು ಕೇಳಿ ನನ್ನ ಮನಸ್ಸಿಗೆ ತುಂಬ ನೋವುಂಟಾಯಿತು. ಗಾಂಧಿಯನ್ನು ದ್ವೇಷಿಸುವ ಇಂತಹ ಜನಗಳಲ್ಲಿ ನಾವು ನೌಕರಿ ಮಾಡಬಾರದು ಎಂದುಕೊಂಡು ಮಾರನೇ ದಿನವೇ ನನ್ನ ರಾಜೀನಾಮೆಯನ್ನು ಸಾಹೇಬರಿಗೆ ಒಪ್ಪಿಸಿದೆನು. ಆಗ ಅವರು ಪಾದ್ರಿ ಪರೀಕ್ಷೆಗೆ ಕಟ್ಟಿದ್ದರು. ಪರೀಕ್ಷೆಯಲ್ಲಿ ಉತ್ತೀರ್ಣವಾಗದಿದ್ದರೆ ಅವನನ್ನು ಸ್ವದೇಶಕ್ಕೆ ವಾಪ್ಸು ಕಳುಹಿಸುತ್ತಿದ್ದರು. ಆಗ ಸಾಹೇಬರು ಇನ್ನು ಸ್ವಲ್ಪ ಕಾಲ ಇರಬೇಕು. ನಿಮಗೆ ಇನ್ನೂ ಹೆಚ್ಚು ಸಂಬಳ ಕೊಡುತ್ತೇನೆ ಎಂದು ಹೇಳಿದರು. ನಾನು ಸಾಧ್ಯವಿಲ್ಲ, ನಾನು ಗಾಂಧಿ ವಿರೋಧಿಗಳಲ್ಲಿ ಕೆಲಸ ಮಾಡುವುದಿಲ್ಲ. ಗಾಂಧಿ ನಮ್ಮ ದೇಶದ ಉದ್ಧಾರಕರು. ನಿಮಗೆ ಏಸುಸ್ವಾಮಿ ಹೇಗೋ ಹಾಗೆ ನಮಗೆ ಮಹಾತ್ಮ ಗಾಂಧಿ ದೊಡ್ಡವರು ಎಂದು ಹೇಳಿದೆನು. ಅಲ್ಲಿಂದ ಗುಬ್ಬಿವಾಸವನ್ನು ಬಿಟ್ಟು ತುಮಕೂರಿಗೆ ಹಿಂದಿರುಗಿದೆನು."

ಈ ಮೇಲಿನ ಘಟನೆ ಬಹಳ ಸಣ್ಣದು ಎಂದು ನಮಗೆ ಅನ್ನಿಸಬಹುದು. ಅಂದಿನ ಶಾಲಾಧ್ಯಾಪಕರ ತಿಂಗಳ ಸಂಬಳ ಆರೋ ಅಥವಾ ಏಳು ರೂ. ಇರಬಹುದು. ಮನೆಯಲ್ಲಿ ಕಿತ್ತು ತಿನ್ನುವ ಬಡತನ ಇಷ್ಟೆಲ್ಲ ತೊಂದರೆ ನಡುವೆ ಗಾಂಧಿ ಟೋಪಿ ಧರಿಸಿ ಪಾದ್ರಿಗೆ ಕನ್ನಡ ಪಾಠ ಮಾಡಲು ಬಂದಿದ್ದು ಅಪರಾಧವಾಗಿ ಕೆಲಸಕ್ಕೆ ರಾಜೀನಾಮೆ ಕೊಟ್ಟ ಬಿ. ಶಿವಮೂರ್ತಿಶಾಸ್ತ್ರಿಗಳ ದೇಶಭಕ್ತಿ ಮೆಚ್ಚುವಂತಹದು.

ಭಾರತ ದೇಶದಲ್ಲಿ ಒಂದು ಕಡೆ ಧನಿಕರ, ಭೂಮಾಲಿಕರ, ವಿದ್ಯಾವಂತರ, ಅಧಿಕಾರಿಗಳ ಕಾಟ, ಮಳೆ ಸುರಿಸದೆ ಬೆಳೆ ಬೆಳೆಯದೆ ಪದೇ ಪದೇ ಬರವನ್ನು ತಂದಿಡುತ್ತಿದ್ದ ದೈವದ ಕಾಟ ಇನ್ನೊಂದು ಕಡೆ. ಸರಕಾರವೂ ವಿದೇಶಿಗರದು. ಅವರ ಪಾಲಿಗೆ ಭಾರತೀಯರು ಬರೀ ಗುಲಾಮರು. ಇವರ ಬಣ್ಣ ಮಾಸಲು ಅವರದು ಕೆಂಪು, ಈ ಕಪ್ಪು ತೊಗಲಿನ ಜನರ ಬೆನ್ನಿನ ಮೇಲೆ ಸವಾರಿ ಮಾಡಲೆಂದೇ ತಾವು ಹುಟ್ಟಿದ್ದೇವೆ ಎಂದು ಕೆಂಪು ಜನರ ಭ್ರಾಂತಿ. ಸರಕಾರ ಮಾಡಿದ್ದೆಲ್ಲವೂ ಇವರ ಯೋಗಕ್ಷೇಮಕ್ಕೆ ಎಂಬ ಭಾವ. ಇದು ತಮಗೆ ದೈವದತ್ತ ಕರ್ತವ್ಯ ಎಂಬ ಅಭಿಪ್ರಾಯ ಕೆಂಪು ಜನರಲ್ಲಿ ಬಹಳವಾಗಿ ಬೇರೂರಿತ್ತು. White Man's Burden ಎಂಬ ಶಬ್ದಗಳೂ ಹುಟ್ಟಿದ್ದು ಅದಕ್ಕಾಗಿಯೇ.



ರಾಜಕೀಯ ಪ್ರಜ್ಞೆ ಜನರಲ್ಲಿ ಮೂಡತೊಡಗಿತು. ಈ ರಾಜಕೀಯ ಜಾಗೃತಿಯೇ ರಾಷ್ಟ್ರೀಯ ಮಹಾಸಭೆಗೆ–ಕಾಂಗ್ರೆಸ್ಸಿಗೆ ಜನ್ಮಕೊಟ್ಟದ್ದು. ಭಾರತ ದೇಶದ ಪುನರುಜ್ಜೀವನಕ್ಕೆ ಈ ರಾಜಕೀಯ ಪ್ರಜ್ಞೆ ಒಂದು ಕಾರಣ ಆಗಲಿಲ್ಲ. ಧಾರ್ಮಿಕ, ಸಾಮಾಜಿಕ, ಶಿಕ್ಷಣ ಕ್ಷೇತ್ರಗಳಲ್ಲಿ ಪುನರುತ್ಥಾನದ ಚಳವಳಿ ಮೊದಲೇ ರೂಪಗೊಳ್ಳುತ್ತಿತ್ತು. ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ವಿವೇಕಾನಂದರ ಧಾರ್ಮಿಕ ಚಳವಳಿ ತಲೆಯೆತ್ತುತ್ತಿತ್ತು. ಭಾರತದ ಆತ್ಮವನ್ನು ಮತ್ತೆ ಚೇತನಗೊಳಿಸಬೇಕು ಎಂಬ ಚಳುವಳಿ ಅದು. ಒಂದು ರಾಷ್ಟ್ರೀಯ ಸ್ವರೂಪ ಈ ಚಳವಳಿಗೆ ತಾನಾಗಿಯೆ ಬಂತು. ರಾಜಾರಾಮಮೋಹನರಾಯರು ಆಧುನಿಕ ಭಾರತದ ಜಾಗೃತಿಯ ಜನಕರು ಎನಿಸಿಕೊಂಡಿದ್ದಾರೆ. ಭಾರತದಲ್ಲಿ ಪಾಶ್ಚಿಮಾತ್ಯ ಶಿಕ್ಷಣ ಪ್ರಾರಂಭ ಆಗಲು ಬೇರೆ ಬೇರೆ ಕಾರಣ ಇದ್ದರೂ ರಾಜಾರಾಮ ಮೋಹನರಾಯರ ಪ್ರಯತ್ನವೇ ಹೆಚ್ಚು ಪರಿಣಾಮಕಾರಿ ಕಾರಣ. ಈ ಪ್ರಯತ್ನದ ನಡುವೆಯೇ ಅವರು ಇಂಗ್ಲೆಂಡಿಗೆ ಹೋಗಿ ಅಲ್ಲಿ ವಾದ ಮಾಡಿ ಈ ದೃಷ್ಟಿಯನ್ನು ಮಂಡಿಸಿದರು.

ಕಾಲೇಜು ವಿದ್ಯಾರ್ಥಿಗಳ ಕಿವಿಯ ಮೇಲೆ ಫ್ರೀಡಂ, ಮದರ್‌ಲ್ಯಾಂಡ್, ಸಿವಿಲೈಜಶನ್, ಮದರ್‌ಟಂಗ್ ಈ ಶಬ್ದಗಳು ಕಿವಿಗೆ ಬಿದ್ದ ಕೆಲವೇ ದಿನಗಳಲ್ಲಿ ಅವರಿಗೆ ಪರಕೀಯರು, ಅವರ ಆಳ್ವಿಕೆ, ಗುಲಾಮಗಿರಿ ಈ ಎಲ್ಲಾ ಶಬ್ದಗಳ ಅಸಹನೆ ಪ್ರಾರಂಭವಾಗಿ ಸ್ವಾತಂತ್ರ್ಯದ ಕಿಡಿ ಪ್ರಜ್ವಲಿಸಿ ಅಖಂಡ ಭಾರತದಲ್ಲಿ ಚಳುವಳಿ ಹಬ್ಬಿತು.

ಡಾ. ಸೂರ್ಯನಾಥ ಕಾಮತ್ ಅವರು "ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ" ಲೇಖನದಲ್ಲಿ ಒಂದು ಪಕ್ಷಿನೋಟವನ್ನು ನೀಡಿದ್ದಾರೆ. ಅದನ್ನು ಯಥಾವತ್ತಾಗಿ ಕೊಟ್ಟಿದ್ದೇನೆ. "ಸ್ವಾತಂತ್ರ್ಯ ಚಳುವಳಿಯಲ್ಲಿ ತುಮಕೂರು ಜಿಲ್ಲೆ ಮಹತ್ವದ ಪಾತ್ರ ವಹಿಸಿತ್ತು. ೧೯೩೮ರಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆದ ಜೀವಂತ ಸತ್ಯಾಗ್ರಹದಲ್ಲಿ ಸಾವಿರಾರು ರೈತರು ಪಾಲುಗೊಂಡು ನೂರಾರು

ಜನ ಜೈಲು ಕಂಡರು. "ಕ್ವಿಟ್ ಇಂಡಿಯಾ" ಚಳವಳಿಯಲ್ಲೂ ರೈತರು, ವಿದ್ಯಾರ್ಥಿಗಳೂ ಮಹತ್ವದ ಪಾತ್ರವಹಿಸಿದರು.

ಅಸಹಕಾರ ಚಳವಳಿಯ ಕಾಲದಲ್ಲೇ ತುಮಕೂರು–ಮಧುಗಿರಿಗಳು (೧೯೨೧–೨೨ ಕಾಂಗ್ರೆಸ್ಸಿನ ಚಟುವಟಿಕೆ) ಕೇಂದ್ರಗಳಾಗಿದ್ದವು. ಆದರೆ ೧೯೩೮ರ ವರೆಗೂ ಸಂಸ್ಥಾನ ಪ್ರದೇಶಗಳಲ್ಲಿ ಯಾವುದೇ ಕಾನೂನುಭಂಗ ಚಳುವಳಿ ನಡೆಯಲಿಲ್ಲ. ೧೯೩೭–೩೮ರಲ್ಲಿ ಆರಂಭವಾದ ಚಳವಳಿ ಜವಾಬ್ದಾರಿ ಸರಕಾರಕ್ಕಾಗಿ ಇತ್ತು. ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ಸ್ವಾತಂತ್ರ್ಯಕ್ಕಾಗಿ ನಡೆದ ಸ್ಥಿರ ಚಳವಳಿ ಆಗಿತ್ತು.

೧೯೨೦ರ ಪರಿಸರದಲ್ಲಿ ತುಮಕೂರಿನಲ್ಲಿ ಕಡಬಾ ರಂಗಯ್ಯಂಗಾರ್, ಸೆಟ್ಲೂರು ವಕೀಲರು ಗಣ್ಯ ಕಾಂಗ್ರೆಸ್ಸಿಗರು. ೧೯೨೨ರಲ್ಲಿ ರಂಗಯ್ಯಂಗಾರರು ಗಯಾ ಕಾಂಗ್ರೆಸ್ಸಿಗೆ ಹೋಗಿದ್ದರು. "ಮೈಸೂರು ಕ್ರಾನಿಕಲ್" ಇಂಗ್ಲಿಷ್ ಪತ್ರಿಕೆ ಹೊರಡಿಸುತ್ತಿದ್ದರು. ಈ ಕಾಲಕ್ಕೆ ಕೀರ್ತನಕಾರ ಜಯರಾಮಾಚಾರ್ಯ ಕೊಪ್ಪಳರು ತುಮಕೂರು ಮಧುಗಿರಿಗಳಲ್ಲಿ ಜನಜಾಗೃತಿ ಮಾಡಿದರು. ೧೯೨೧–೨೨ರಲ್ಲಿ ಈ ಕೀರ್ತನಕಾರರ ಪ್ರೇರಣೆಯಿಂದ ಮಧುಗಿರಿಯಲ್ಲಿ ಟಿಳಕರ ಸ್ಮಾರಕವಾಗಿ ಒಂದು ಸಭಾಭವನವನ್ನು ಕಟ್ಟಿದ್ದರು. ತುಮಕೂರಿನ ಇನ್ನೊಬ್ಬ ಗಣ್ಯ ನಾಯಕರೆಂದರೆ ತಾಳಕೆರೆ ಸುಬ್ರಹ್ಮಣ್ಯ ಅವರು. ೧೯೨೦ರಲ್ಲಿ ಟಿಳಕರ ನಿಧನಕ್ಕಾಗಿ ತುಮಕೂರಿನಲ್ಲಿ ನಾಟಕದ ಥಿಯೇಟರಿನಲ್ಲಿ ಸಂತಾಪ ಸಭೆ ನಡೆಯಿತು.

ತುಮಕೂರಿನಲ್ಲಿ ೧೯೨೭ರಲ್ಲಿ ಡಾ. ಹರ್ಡೀಕರರು ಸೇವಾ ದಳದ ಶಿಬಿರವೊಂದನ್ನು ನಡೆಸಿದರು. ಯುಸೂಫ್ ಮೆಹರಾಲಿಯವರು ಬೊಂಬಾಯಿಂದಲೂ ಶ್ರೀನವಾಸ ಮೇಗಾರರು ಚೆನ್ನೈಯಿಂದಲೂ ಈ ಶಿಬಿರಕ್ಕೆ ಬಂದು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತಾಡಿದರು. ಬೆಳಗಾವಿ ಕಾಂಗ್ರೆಸ್ಸಿಗೆ ೧೯೨೪ರಲ್ಲಿ ಜಿಲ್ಲೆಯಿಂದ ಹಲವರು ತೆರಳಿದ್ದರು, ರಂಗಯ್ಯಂಗಾರರು ಅವರಲ್ಲಿ ಒಬ್ಬರು.

೧೯೨೭ರಲ್ಲಿ ಖಾದಿ ಪ್ರಚಾರಕ್ಕಾಗಿ ಗಾಂಧೀಜಿ ತುಮಕೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿದರು. ಜುಲೈ ೧ಕ್ಕೆ ತುಮಕೂರಿಗೆ ಬಂದಾಗ ರಂಗಯ್ಯಂಗಾರರ ನೇತೃತ್ವದ ಸಮಿತಿ ಅವರನ್ನು ಸ್ವಾಗತಿಸಿತು. ಗಾಂಧೀಜಿಗೆ ತುಮಕೂರಿನ ಜನ ಖಾದಿ ಕಾರ್ಯಕ್ಕಾಗಿ ೨,೨೫೦ರೂ. ವಿದ್ಯಾರ್ಥಿಗಳು ಅಧ್ಯಾಪಕರೂ ರೂ. ೨೫೦ ಪ್ರಾಣಿದಯಾ ಸಂಘದವರು ಗೋ ರಕ್ಷಣೆಗಾಗಿ ರೂ. ೨೦೦ ಕಾಣಿಕೆ ಕೊಟ್ಟರು. ಗಾಂಧೀಜಿ ಊರ ಆದಿಕರ್ನಾಟಕರ ಕೇರಿಗೆ ಭೇಟಿ ಇತ್ತು ಅಲ್ಲಿನ ಸ್ವಚ್ಛತೆ ಬಗ್ಗೆ ಕೊಂಡಾಡಿದರು. ಮಧುಗಿರಿಗೂ ಕೊರಟಗೆರೆಗೂ ಗಾಂಧೀಜಿ ಸಂದರ್ಶನ ನೀಡಲು ಅಲ್ಲಿ ಅವರಿಗೆ ಅನುಕ್ರಮವಾಗಿ ೧೦೦೦ ಹಾಗೂ ೧೦೦ ರೂ. ಕಾಣಿಕೆ ಸಂದಿತು.



೧೯೨೯ರಲ್ಲಿ ಗಾಂಧೀ ಜಯಂತಿಯಂದು ಎಂ. ನೀಲಕಂಠರಾಯರು ಸಂಚಾಲಕರಾಗಿ ಖಾದೀ ಭಂಡಾರ ತೆರೆಯುವಂತಾಯಿತು. ಈ ಖಾದೀ ಭಂಡಾರ ರಾಷ್ಟ್ರೀಯ ಚಟುವಟಿಕೆಯ ಗಣ್ಯ ಕೇಂದ್ರವಾಗಿತ್ತು. ತುಮಕೂರಿಗೆ ಗಾಂಧೀಜಿ ಭೇಟಿ ಕೊಡುವ ಸಂದರ್ಭದಲ್ಲಿ ಬಿ. ಶಿವಮೂರ್ತಿ ಶಾಸ್ತ್ರಿಗಳು "ಗಾಂಧಿ ಮಹಾತ್ಮನ ತತ್ವಬೋಧೆ" ಲಘು ಕೃತಿ ರಚಿಸಿ ಮುದ್ರಣ ಮಾಡಿ ಮಹಾತ್ಮ ಗಾಂಧೀಜಿ ಅವರಿಗೆ ಅರ್ಪಿಸಿದರು. ೧೯೨೭ರಲ್ಲಿ ಮುದ್ರಣವಾದ ಈ ಪುಸ್ತಕವನ್ನು ಮುಂದಿನ ಇತಿಹಾಸಜ್ಞರು ಗಮನಿಸದೆ ಹೋದ್ದರಿಂದ ಈ ಪುಸ್ತಕದ ವಿಷಯವೇ ಮರೆತು ಹೋಗಿತ್ತು. ಈ ಲಘು ಪುಸ್ತಕದ ಮುನ್ನುಡಿಯಲ್ಲಿ ಲೇಖಕರು ಬರೆದ ಮಾತನ್ನು ಯಥಾವತ್ತಾಗಿ ಕೊಡಲಾಗಿದೆ.

❑

# ಮುನ್ನುಡಿ

"ಸಹೃದಯ ಮಹಾಶಯರೇ! ಲೋಕವಿಖ್ಯಾತ ಮಹಾಪುರುಷರೆಂದೂ ಅದ್ವಿತೀಯ ಪ್ರತಿಭಾಸಂಪನ್ನರೆಂದೂ ನಡೆನುಡಿಗಳೊಂದಾದ ದಿವ್ಯ ಮಹಿಮರೆಂದೂ ಯಾರನ್ನೂ ಲೋಕವೆಲ್ಲವೂ ಏಕಕಂಠದಿಂದ ಒಪ್ಪುವುದೋ ಆ ವಿಖ್ಯಾತ ವಿಭೂತಿಗಳಾದ ಮಹಾತ್ಮ ಗಾಂಧಿಯವರು ದೀನರಾದ ಭಾರತೀಯರನ್ನು ಪುನೀತರನ್ನಾಗಿ ಮಾಡಲು ಭರತಖಂಡದ ಪ್ರತಿಯೊಂದು ನಾಡನ್ನೂ ಸಂಚರಿಸುತ್ತಿರುವುದು ಸರಿಯಷ್ಟೆ?

ಇಂತಹ ಸುಸಮಯದಲ್ಲಿ ನಮ್ಮ ಕರ್ನಾಟಕಕ್ಕೋ ತಮ್ಮ ದಿವ್ಯಪಾದವು ದಯಮಾಡಿಸಬೇಕೆಂದೂ ಕನ್ನಡಿಗರು ಬೇಡಿಕೊಳ್ಳಲು ಮಹಾತ್ಮರು ನಮ್ಮಗಳ ಪ್ರಾರ್ಥನೆಯನ್ನು ಅಂಗೀಕರಿಸಿ ಕನ್ನಡ ನಾಡಿಗೆ ದಯಮಾಡಿಸಿದರು. ಮಹಾತ್ಮ ಗಾಂಧಿಯವರು ಕರ್ನಾಟಕಕ್ಕೆ ಬಂದುದು ನಮ್ಮ ಭಾಗ್ಯೋದಯವೇ ಸರಿ. ಗಾಂಧಿಯವರು ನಮ್ಮ ತುಮಕೂರಿಗೆ ದಯಮಾಡಿಸಿದುದರ ಸ್ಮರಣಾರ್ಥವಾಗಿ ಈ ಚಿಕ್ಕ ಪದ್ಯಗ್ರಂಥವನ್ನು ಬರೆದು ಪ್ರಕಟಿಸಲಾಯಿತು. ಈ ಪುಸ್ತಕದಲ್ಲಿ ಗಾಂಧಿಯವರ ಬೋಧೆಯನ್ನು ಮತ್ತೆ ಕೆಲವು ಅವರು ಮಾಡಿದ ಕೆಲಸ ಕಾರ್ಯಗಳನ್ನು ಸಂಕ್ಷೇಪವಾಗಿ ಹೇಳಿದೆ. ಆದುದರಿಂದ ಈ "ಗಾಂಧಿ ಮಹಾತ್ಮರ ತತ್ವಬೋಧೆ" ಎಂಬ ಹೆಸರು ಕೊಡಲ್ಪಟ್ಟಿದೆ.

ಈ ಗ್ರಂಥವನ್ನು ನನ್ನ ವಿದ್ಯಾಗುರುಗಳಾದ ಕರ್ನಾಟಕ ಭಾಷಾರತ್ನಂ ಪಿ. ಆರ್. ಕರಿಬಸವ ಶಾಸ್ತ್ರಿಗಳು ಆಮೂಲಾಗ್ರವಾಗಿ ಓದಿ ನೋಡಿ ತಪ್ಪುಗಳಿಲ್ಲದಂತೆ ತಿದ್ದಿಕೊಟ್ಟದ್ದಕ್ಕಾಗಿ ನಾನು ಆ ಪಂಡಿತವರ್ಯರಿಗೆ ಅತ್ಯಂತ ಕೃತಜ್ಞನಾಗಿರುವೆನು." (ಇಂತು ಕನ್ನಡಿಗ– ಕೀರ್ತನಕಾರ ಬಿ. ಶಿವಮೂರ್ತಿಶಾಸ್ತ್ರಿ)



**ಚರಕವೇ ಚಕ್ರಾಯುಧವು ವರ**
**ಹರಿಯೆ ಗಾಂಧಿ ಮಹಾತ್ಮನಾರಯೆ**
**ಮೆರೆವ "ಪಂಡಿತ ನೆಹರು" ಮುಖರೇ ದೆಸೆಯೊಡೆಯರಲ್ತೇ**
**ಪರರ ಬಟ್ಟೆಯ ಮೋಹಜಾಲವು**
**ಪರರ ಭಾವಿಪ ಮಾನವರೆ ಈ**
**ಧರೆಯ ರಕ್ಕಸರೈಸೆ ಭಾವಿಸಿ ನೋಡು ನಿನ್ನೊಳಗೇ ॥೮॥**
**ಶುದ್ಧಭಕ್ಷಣ ಶುದ್ಧಭಾಷಣ**
**ಶುದ್ಧ ಬೋಧೆಯು ಶುದ್ಧ ಮಾರ್ಗವು**
**ಶುದ್ಧವರ್ತನೆ ಶುದ್ಧ ಚರಿತವು ಗಾಂಧಿಯೊಳಗೀಗಂ**
**ಸಿದ್ಧವಾಗಿಹನೆಂದು ಪೇಳ್ವರು**
**ಸಿದ್ಧರೀಲೋಕದೊಳು ದಿಟವೈ**
**ಸಿದ್ಧರೊಳು ಪರಿಶುದ್ಧನೆನಪನು ಗಾಂಧಿಯೊಳೆಯೊಳಗೆ ॥೨೫॥**
**ಇಂದು ಭಾರತ ವರ್ಷವೆಲ್ಲವ**
**ನೊಂದನುಂ ಬಿಡದಂತೆ ಯತಿಜನ**
**ವಂದ್ಯನೆನಸೀ ಗಾಂಧಿ ಚರಿಸುತ್ತಿರ್ಪಪನು ದಯೆಯಿಂ**
**ಬಂದು ಕನ್ನಡ ನಾಡಿಗೀಗಂ**
**ಸಂದಖಾದಿಯ ತತ್ವಬೋಧೆಯ**
**ನಿಂದು ಮಾಡುತೆ ಪೊರೆವನೆಮ್ಮನು ಭುವನವಂದಿಪನು ॥೪೫॥**
**ಶಿವಮೂರ್ತಿ ಶಾಸ್ತ್ರಿ ನಾಮಕ**
**ಕವಿಯೋರ್ವಂ ರಚಿಸಿ ಗಾಂಧಿತತ್ವಾವಳಿಯಂ**
**ಸುವಿವೇಕಿಯಾದ ಸಖನಿಗೆ**
**ಸುವಿಲಾಸದೆ ಪೇಳ್ದನಿದುವೆ ಸುಕೃತಮೆನಸುತ್ತಂ॥ ॥೪೯॥**

"ಗಾಂಧಿ ಮಹಾತ್ಮನ ತತ್ತ್ವಬೋಧೆ" ಪುಸ್ತಕದ ಬೆನ್ನುಡಿ ಅಂದಿನ ದಿನಮಾನದ ತುಮಕೂರು ನಗರದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಮಾಹಿತಿ ನೀಡುತ್ತದೆ. ಆದ್ದರಿಂದ ಅದನ್ನು ಇಲ್ಲಿ ನೀಡಿರುವೆ.

"ಸೇವಾಸಂಘ–ತುಮಕೂರು, ಪ್ರಾರ್ಥನೆ : ದೇಶಸೇವೆಯೇ ಈಶಸೇವೆಯು ಈ ಭಾರತಭೂಮಿಯು ಯುಗಾಂತರದಿಂದಲೂ ಎಷ್ಟು ಮಟ್ಟಿನ ಪವಿತ್ರತೆಯನ್ನು ಪಡೆದಿದೆ ಎಂಬುದೂ ಭಾರತೀಯರು ಅಧ್ಯಾತ್ಮ ವಿಚಾರ, ರಾಜಭಕ್ತಿ, ದೇಶವಾತ್ಸಲ್ಯ, ಕೃಷಿ ಮತ್ತು ಕುಶಲವಿದ್ಯೆ ಮುಂತಾದವುಗಳಲ್ಲಿ ಇತರ ಖಂಡಗಳಿಗಿಂತಲೂ ಬಹು ಪುರಾತನ ಕಾಲದಲ್ಲಿಯೇ ಅಗ್ರಸ್ಥಾನ ಪಡೆದಿದ್ದರೆಂಬುದೂ ಪ್ರಪಂಚಕ್ಕೆ ತಿಳಿಯದ ವಿಷಯವಲ್ಲ.

ಇವುಗಳೆಲ್ಲವೂ ಲೋಪವಾಗುತ್ತಿರುವುದನ್ನು ನೋಡಿಯೂ ಸುಮ್ಮನೆ ತೂಕಡಿಸುತ್ತಿರುವುದು ಯಾವ ಧರ್ಮ? ಅವರಲ್ಲಿಯೂ ಪ್ರಜೆಗಳಾದವರೂ ಪಾಶ್ಚಾತ್ಯರ ಅನುಕರಣದಿಂದುಂಟಾದ ನವನಾಗರಿಕತೆ ಎಂಬ ಕ್ಷಯರೋಗ ಪ್ರಾಪ್ತಿಯಾಗಿ ಆಧ್ಯಾತ್ಮ ವಿಚಾರವು ಅವರ ಹಾದಿ ಹಿಡಿಯಿತು. ರಾಜಭಕ್ತಿಯು ರಾಹುಭುಕ್ತಿಯಲ್ಲಿ ಸೇರಿತು. ದೇಶವಾತ್ಸಲ್ಯ ಮತಮಾತ್ಸರ್ಯವಾಗಿ ಪರಿಣಮಿಸಿತು. ಕೃಷಿ ಮತ್ತು ಕೈಗಾರಿಕೆಗಳಿಗೆ ತಿಲಾಂಜಲಿಯು ಕೊಡಲ್ಪಟ್ಟು, ಹುದ್ದೆಯೆಂಬ ದಾಸ್ಯವೃತ್ತಿಯ ಪಿಶಾಚಗ್ರಸ್ತರಾಗಿ ಬಹುಮಂದಿ ಕರ್ತವ್ಯ ಭ್ರಷ್ಟರಾಗುತ್ತಾ ಬಂದರು. ಇದರಿಂದ ದೇಶಾಭಿಮಾನಿಗಳಾದ ಅನೇಕ ಮಹನೀಯರ ದೇಶಾಭ್ಯುದಯ ಪ್ರಯತ್ನಗಳೆಲ್ಲಾ ನಿಷ್ಫಲವಾಗುತ್ತಾ ಬಂದವು. ದೇಶವಾದರೂ ಕ್ಷಾಮಡಾಮರಾದಿ ಭಾದೆಗಳಿಗೆ ತುತ್ತಾಯಿತು ಇಲ್ಲವೆ? ಯೋಚಿಸಿರಿ.

ಇದನ್ನೆಲ್ಲಾ ತಿಳಿದು ಲೋಕಸೇವೆ ಮಾಡಬೇಕೆಂಬ ಇಚ್ಛೆಯಿಂದ ಈ ತುಮಕೂರಿನಲ್ಲಿ "ಸೇವಾ ಸಂಘವೊಂದನ್ನು" ಸ್ಥಾಪಿಸಲಾಗಿದೆ. ಇದಕ್ಕೆ ಧನಿಕರು ದ್ರವ್ಯ ಮೂಲಕವೂ ದರಿದ್ರರು ಕಾಯಕವಾಗಿಯೂ ಮಹಾತ್ಮರು ಮಾನಸಿಕವಾಗಿ ವಿದ್ಯಾವಂತರು ವಾಚಕವಾಗಿಯೂ ಸಹಾಯ ಮಾಡಲವಕಾಶವುಂಟಾದುದರಿಂದ ಲೋಕಸೇವಾಭಿಮಾನಿಗಳಾದ ಪ್ರತಿಯೊಬ್ಬರು ಈ ಸಂಘಕ್ಕೆ ಸದಸ್ಯರುಗಳಾಗಿ ಸಂಘದ ಉದ್ದೇಶಗಳನ್ನು ಸಫಲಗೊಳಿಸಿ ಶ್ರೇಷ್ಠವಾದ ಮಾನವ ಜನ್ಮವನ್ನೆತ್ತಿದದಕ್ಕೆ ಸಾರ್ಥಕವಾಗಿ ನಶ್ವರ ದೇಹಾಭಿಮಾನವನ್ನು ತ್ಯಜಿಸಿ ಶಾಶ್ವತವಾದ ಕೀರ್ತನ ಶರೀರವನ್ನು ಗಳಿಸಬೇಕೆಂದು ಪ್ರಾರ್ಥಿಸುವ.

| | |
|---|---|
| ಕೆ. ಶ್ರೀನಿವಾಸಮೂರ್ತಿ ವಕೀಲರು | ಸಜ್ಜನ ಸೇವಕ |
| ಸೆಕ್ರೆಟರಿ | ಬಿ.ಸಿ.ಚೊಕ್ಕನಾಥರಾಜ |



ಬಿ. ಶಿವಮೂರ್ತಿಶಾಸ್ತ್ರಿಗಳು ಪ್ರಬುದ್ಧ ಕರ್ನಾಟಕ(ಸಂಪುಟ ೫೧ ಸಂಚಿಕೆ ೪ ಗಾಂಧಿ ಸಂಚಿಕೆ ೧೯೭೦) ವಿಶೇಷಾಂಕಕ್ಕೆ ಬರೆದ ಲೇಖನ "ಗಾಂಧೀಜಿ ಸಂದರ್ಶನ"ದಲ್ಲಿ ಈ ಮಾತುಗಳನ್ನೇ ಬರೆದಿದ್ದಾರೆ. "...ಇದೇ ಸಂದರ್ಭದಲ್ಲಿ ೧೯೨೭ನೇ ಜುಲೈ ೧೪ ರಂದು ಮಹಾತ್ಮ ಗಾಂಧೀಯವರು ನಮ್ಮ ತುಮಕೂರಿಗೆ ದಯುವಮಾಡಿಸಿದರು. ತುಮಕೂರು ನಗರಸಭೆಯುವರೂ ಪ್ರಾಣಿ ದಯಾಸಂಘದವರೂ ಮಹಾತ್ಮರಿಗೆ ಮಾನಪತ್ರಗಳನ್ನು ಸಮರ್ಪಿಸಿದರು. ನಾನು ಈ ಸುಸಂದರ್ಭಕ್ಕಾಗಿ ಬರೆದಿದ್ದ "ಗಾಂಧಿ ಮಹಾತ್ಮರ ತತ್ವಗಳು" ಎಂಬ ಪುಟ್ಟ ಗ್ರಂಥವನ್ನು ಅಂದಿನ ಸಭೆಯಲ್ಲಿ ಓದಿ ಗಾಂಧೀಜಿ ಅವರಿಗೆ ಒಪ್ಪಿಸಿದನು. ಗಾಂಧೀಜಿಯವರಿಗೆ ಕನ್ನಡ ಬರುತ್ತಿರಲಿಲ್ಲ–ಎಂಬುದು ನನಗೆ ಗೊತ್ತು. ಆದರೆ ನನಗೆ ಬರುತ್ತಿದ್ದ ಅಲ್ಪ ಸ್ವಲ್ಪ ಹಿಂದೀ ಭಾಷೆಯಲ್ಲಿ ಗಾಂಧೀಜಿಯವರಿಗೆ ಅದರ ಅರ್ಥವನ್ನು ಹೇಳಿದೆನು. ಮಹಾತ್ಮರು ಈ ಗ್ರಂಥಸ್ಥವಾದ ಅಭಿಪ್ರಾಯವನ್ನು ಗ್ರಹಿಸಿದರು. "ಯದ್ಯಪಿ ಮೇ ಕನ್ನಡೀ ಭಾಷಾ ಕೊ ನಹೀ ಜಾನತಾ ಹೂಂ. ಫಿರ್ ಭೀ ಆಪಕೇ ಗ್ರಂಥಕಾ ವಿಚಾರ್ ಸುನಕರ್ ಮುಝೇ ಬಹುತ್ ಆನಂದ ಹು" ಎಂದು ಆಶೀರ್ವದಿಸಿದರು.

ತುಮಕೂರು ಜಿಲ್ಲೆ ಸ್ವಾತಂತ್ರ್ಯ ಇತಿಹಾಸ ಬರೆದ ಲೇಖಕರಿಗೆ ಈ ಸಂಘದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಈ ಸಂಘದ ಕಾರ್ಯದರ್ಶಿ ಕೆ. ಶ್ರೀನಿವಾಸಮೂರ್ತಿ ವಕೀಲರು, ಬಿ.ಸಿ.ಚೊಕ್ಕನಾಥರಾಜ ಬಗ್ಗೆ ವಿವರ ಸಂಗ್ರಹಿಸಲು ಹತ್ತು ವರ್ಷದ ಮುಂಚೆ ಪ್ರಯತ್ನಪಟ್ಟೆ. ಈ ಇಬ್ಬರೂ ಮಹನೀಯರ ಬಗ್ಗೆ ವಿವರ ಲಭ್ಯವಾಗಲಿಲ್ಲ.

ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಸಂಸ್ಥೆ ಸ್ಥಾಪಿತವಾಗುವ ಮೊದಲೇ ತುಮಕೂರು ಜಿಲ್ಲೆಯಲ್ಲಿ ಮಹಾತ್ಮ ಗಾಂಧಿಯವರ ಪ್ರಭಾವದಿಂದ ಪಾನ ನಿರೋಧ ಆಂದೋಲನ ಮತ್ತು ಖಾದಿ ಪ್ರಚಾರ ನಡೆಯುತ್ತಿತ್ತು. ಆಂಧ್ರ ಪ್ರದೇಶದ ಅಂಚಿನಲ್ಲಿರುವ ಪಾವಗಡ ಮಧುಗಿರಿ ತಾಲ್ಲೂಕುಗಳು ಸ್ವಾತಂತ್ರ್ಯ ಆಂದೋಲನಕ್ಕೆ ಸಜ್ಜಾಗುತಿದ್ದವು. ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದ್ದ ಕರ ನಿರಾಕರಣೆ ಭೂಗತ ಕಾರ್ಯಕ್ರಮಗಳಲ್ಲಿ ಜಿಲ್ಲೆಯ ಅನೇಕ ಜನ ಭಾಗಿಗಳಾಗಿ ಸೆರೆಮನೆ ಸೇರಿದ್ದರು.

ಮಹಾತ್ಮ ಗಾಂಧೀ ಶತಮಾನೋತ್ಸವ ಸಂದರ್ಭದಲ್ಲಿ ಬೆಂಗಳೂರು ಗಾಂಧಿ ಸ್ಮಾರಕ ನಿಧಿ ಸಂಸ್ಥೆಯಿಂದ ೧೯೭೦ರಲ್ಲಿ ಪ್ರಕಟವಾದ "ಗಾಂಧಿ ಮತ್ತು ಕರ್ನಾಟಕ" ಪುಸ್ತಕದಲ್ಲಿ ಪು. ೧೯೪–೧೯೭ ತುಮಕೂರು ನಗರಕ್ಕೆ ಗಾಂಧಿ ಭೇಟಿ ನೀಡಿದ ಕುರಿತು ವಿವರವಾದ ಲೇಖನ ಅಚ್ಚಾಗಿದೆ. ಗಾಂಧೀಜಿಯವರ ತುಮಕೂರು ಭೇಟಿಯ ಪ್ರಸಂಗವನ್ನು ಸಮಗ್ರವಾಗಿ ದಾಖಲಿಸಲಾಗಿದೆ. ಹಾಗೆಯೇ ೧೯೩೪ ಜನವರಿ ೪ ರಂದು ಗಾಂಧೀಜಿ ಅವರು ತುಮಕೂರಿಗೆ ಭೇಟಿಕೊಟ್ಟ ವಿವರವನ್ನು ಬಿ. ಶಿವಮೂರ್ತಿ ಶಾಸ್ತ್ರಿಗಳು "ಗಾಂಧೀಜಿ ಸಂದರ್ಶನ" ಲೇಖನದಲ್ಲಿ ಈ ರೀತಿ ದಾಖಲಿಸಿದ್ದಾರೆ.

"ಒಂದು ದಿನ ತುಮಕೂರಿನಲ್ಲಿ ಸರ್ಕಾರಿ ಹೈಸ್ಕೂಲ್ ಮುಂಭಾಗದ ಬಯಲಿನಲ್ಲಿ ಮಹಾತ್ಮ ಗಾಂಧೀಯವರು ಹರಿಜನೋದ್ಧಾರ ನಿಧಿಗೆ ಹಣ ಕೂಡಿಸುವ ಕಾರ್ಯಕ್ರಮ ಕೈಗೊಂಡಿದ್ದರು. ಅಂದಿನ ಸಭೆಗೆ ಸಹಸ್ರಗಟ್ಟಲೆ ಜನರು ಸೇರಿದ್ದರು. ಆಗ ಸಭೆಯಲ್ಲಿ ಹೆಣ್ಣು ಮಕ್ಕಳನ್ನು ಕುರಿತು ಗಾಂಧೀಜಿ "ಸ್ತ್ರೀಯೋಂಕೆ ಭೂಷಣ್ ಹೃದಯ ಕೀ ಪವಿತ್ರತಾ ಹೈ, ಸುವರ್ಣ ಭೂಷಣ ಕೇವಲ್ ಅಲಂಕಾರ ಹೈ" ಎಂದು ಹೇಳಿ ಸಮಾಜದಲ್ಲಿ ಬಹಳ ಹಿಂದುಳಿದಿರುವ ಹರಿಜನರ ಉದ್ಧಾರಕ್ಕಾಗಿ ಮಹಿಳೆಯರು ತಮ್ಮ ಆಭರಣಗಳನ್ನು ಕಾಣಿಕೆಯಾಗಿ ಕೊಡಬೇಕೆಂದು ಕೇಳಿದರು. ಆ ಸಭೆಯಲ್ಲಿದ್ದ ಪ್ರಜ್ಞಾವಂತ ಮಹಿಳೆಯರನೇಕರು ತಮ್ಮ ಮೈಮೇಲಿನ ಚಿನ್ನದ ಸರಗಳು, ಬಳೆಗಳು, ಉಂಗುರುಗಳು ಮೊದಲಾದ ಬೆಲೆಬಾಳುವ ಆಭರಣಗಳನ್ನು ಗಾಂಧೀಜಿಯವರ ಜೋಳಿಗೆಗೆ ಧಾರಾಳವಾಗಿ ಅರ್ಪಿಸಿದರು. ಆಗ ನನಗೂ ಕೂಡ ಏನಾದರೂ ಚಿನ್ನದ ಕಾಣಿಕೆ ಕೊಡಬೇಕು ಎಂದು ಯೋಚನೆ ಬಂದಿತು. ನನ್ನ ಕೈ ಮೈಗಳನ್ನು ತಡಕಿ ನೋಡಿಕೊಂಡೆನು. ನನ್ನ ಮೈಮೇಲೆ ಒಂದು ಗುಂಜಿ ತೂಕದ ಬಂಗಾರವೂ ಇರಲಿಲ್ಲ. ನನ್ನ ಜೇಬಿನಲ್ಲಿದ್ದ ಎರಡು ರೂಪಾಯಿಗಳನ್ನು ಮಾತ್ರ ಹರಿಜನರ ನಿಧಿಗೆ ಅಳಿಲು ಭಕ್ತಿಯಾಗಿ ಒಪ್ಪಿಸಿದೆನು. ಆಗ ಶ್ರೀರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟುವಾಗ ಅಳಿಲು ಬಂದು ಮರಳು ಸೇವೆಯನ್ನು ಅರ್ಪಿಸಿದ ಕಥೆಯು ನನ್ನ ನೆನಪಿಗೆ ಬಂದಿತು. ಅಂದಿನ ಸಭೆಯಲ್ಲಿ ನಮ್ಮ ಊರಿನ ಹೆಣ್ಣು ಮಕ್ಕಳು ತಮ್ಮ ಮೈಮೇಲಿದ್ದ ಚಿನ್ನದ ಒಡವೆಗಳನ್ನು ಧಾರಾಳವಾಗಿ ಗಾಂಧಿ ಜೋಳಿಗೆಗೆ ಹಾಕಿದುದು, ನನಗೆ



ಹಂಪೆಯಲ್ಲಿ ವಿದ್ಯಾರಣ್ಯರು ಚಿನ್ನದ ಮಳೆಯನ್ನು ಕರೆಸಿದ ಕಥೆ ನೆನಪಿಗೆ ಬಂದಿತು. ಸಾಮಾನ್ಯವಾಗಿ ಮಹಿಳೆಯರಿಗೆ ಚಿನ್ನದ ಮೇಲೆ ಮಮತೆ. ಅದನ್ನು ತೊರೆದು ದೇಶಸೇವೆಗೆ ತಮ್ಮ ಆಭರಣಗಳನ್ನು ಒಪ್ಪಿಸಿದುದು ನಿಜಕ್ಕೂ ಶ್ಲಾಘ್ಯವಾದ ಕಾರ್ಯವೆಂದು ತಿಳಿವೆನು. ಇಂತಹ ವಿಶೇಷ ಸಂದರ್ಭಗಳು ಮಹಾಪುರುಷರ ಹಾಗೂ ಯುಗ ಪುರುಷರ ಜೀವನದಲ್ಲಿ ಮಾತ್ರ ನೋಡಸಿಗುತ್ತಲ್ಲವೇ?

ಇನ್ನೊಂದು ದಿನ ಸಭೆಯಲ್ಲಿ ತುಮಕೂರು ಪ್ರಾಣಿದಯಾ ಸಂಘದವರು ಅಹಿಂಸಾವಾದಿಗಳಾದ ಮಹಾತ್ಮ ಗಾಂಧಿಯವರನ್ನು ತಮ್ಮ ಸಂಘದ ಗೋರಕ್ಷಣೆ ನಿಧಿಗೆ ಸಹಾಯ ಮಾಡಬೇಕೆಂದು ಕೇಳಿದರು. ಆಗ ಗಾಂಧೀಜಿ "ಮೈ ಏಕ್ ಛೋಟಾ ಪೈಸಾ ಭೀ ನಹೀ ದೂಂಗಾ, ಮೈ ತೊ ಫಕೀರಹೂನ್ ಭಾರತ ಕಾ ಮಹಾಜನ್ ಮುರ್ಝೋ ದೇನೇಕಾ ಸಲ್ ಪೈಸಾ ಹರಿಜನೋದ್ಧಾರ ನಿಧಿಕಾ ಹೈ. ಯಹ್ ಹರಿಜನ ನಿಧೀಸೆ ಮೈ ಪೈಸಾ ದಿಯಾತೋ ಮೈ ಅಪರಾಧಿ ಹೋಂಗಾ" ಎಂದರು. ಗಾಂಧೀಜಿಯವರ ಈ ನಿಷ್ಠುರ ವಾಣಿಯನ್ನು ಕೇಳಿದ ನನಗೆ ಅವರ ಸತ್ಯ ಸಂಧತೆಯ ಅರಿವಾಯಿತು. "ಸತ್ಯವ ನುಡಿವುದೇ ದೇವಲೋಕ" ಎಂಬ ಬಸವಣ್ಣನವರ ವಚನವೂ "ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು" ಎಂಬ ಮಹಾಕವಿ ರಾಘವಾಂಕನ ನುಡಿಯೂ ನೆನಪಾದವು.

ಈ ರೀತಿ ಗಾಂಧೀಜಿ ತುಮಕೂರು ಸಂದರ್ಶನದಿಂದ ತುಮಕೂರು ಜನರಿಗೂ ಆ ಊರಿನವರೇ ಆದ ನನ್ನ ಮನಸ್ಸಿಗೂ ಹೆಚ್ಚಿನ ಪರಿಣಾಮ ವುಂಟಾಯಿತು. ಆಗ ತುಮಕೂರಿನಲ್ಲಿ ಖಾದಿ ಪ್ರಚಾರ, ಹಿಂದೀ ಪ್ರಚಾರ ಬಹಳ ಭರದಿಂದ ನಡೆಯಿತು. ಸ್ವದೇಶೀ ಪ್ರಚಾರ, ಹರಿಜನೋದ್ಧಾರಗಳಿಗೂ ಮೊದಲಾಯಿತು. ಈ ಸಂಬಂಧವಾದ ಸಭೆಗಳಲ್ಲಿ ತಪ್ಪದೆ ನಾನು ಭಾಷಣಗಳನ್ನು ಬಿಗಿಯುತ್ತಿದ್ದೆನು. ಜನರ ಮೆಚ್ಚುಗೆಯೂ ಸಿಗುತ್ತಿತ್ತು. ಅಲ್ಲಿಂದ ಮುಂದೆ ಗಾಂಧೀಜಿ ಬೆಂಗಳೂರಿಗೆ ಪ್ರಯಾಣ ಮಾಡಿದರು. ಆಗ ನಾನು ಮಹಾತ್ಮರ ಬೆನ್ನು ಹತ್ತಿದೆನು. ನಾನು ಗಾಂಧಿ ಭಕ್ತನಾದೆನು" ಎಂದು ಹೇಳಿದ್ದಾರೆ.

೧೯೩೪ರಲ್ಲಿ ಹರಿಜನೋದ್ಧಾರ ಪ್ರಚಾರಕ್ಕಾಗಿ ಮಹಾತ್ಮ ಗಾಂಧೀಜಿಯವರು ತುಮಕೂರಿಗೆ ಭೇಟಿ ಇತ್ತದ್ದು ಸಾಕಷ್ಟು ಪರಿಣಾಮ ಬೀರಿತು.

ತುಮಕೂರು ನಗರದ ಸುಪ್ರಸಿದ್ಧ ವಕೀಲರಾಗಿದ್ದ ಕೆ. ರಂಗಯ್ಯಂಗಾರ್ ಅವರು ಸ್ವಾತಂತ್ರ್ಯ ಆಂದೋಲನಕ್ಕೆ ಪ್ರೇರಕರಾಗುವ ಪತ್ರಿಕೋದ್ಯಮವನ್ನು ಸ್ಥಾಪಿಸಿ ನಡೆಸುತ್ತಿದ್ದರು. ಅದೇ ಕಾಲದಲ್ಲಿ ರಾಷ್ಟ್ರದ ಪ್ರಮುಖ ಮುಖಂಡರು ಗಳನ್ನು ಆಹ್ವಾನಿಸಿ ಪ್ರಚಾರ ಭಾಷಣಗಳನ್ನು ನಡೆಸುತ್ತಿದ್ದರು. ಸ್ವದೇಶಿ ಆಂದೋಲನದ ಪರಿಣಾಮವಾಗಿ ತುಮಕೂರಿನಲ್ಲೊಂದು ಖಾದಿ ಭಂಡಾರ ಸ್ಥಾಪಿತವಾಗಿ ನೀಲಕಂಠರಾವ್ ಇದರ ಜವಾಬ್ದಾರಿ ಹೊತ್ತು ನಡೆಸುತ್ತಿದ್ದರು. ಖಾದಿ ಭಂಡಾರವೇ ಸ್ವಾತಂತ್ರ್ಯ ಹೋರಾಟಗಾರರ ಸೃಷ್ಟಿಗೆ ನೆಲೆಯಾಯಿತು. ಟಿ. ಸುಬ್ರಹ್ಮಣ್ಯಂ, ಸೆಟ್ಲೂರು, ಗುಬ್ಬಿ ರಾಜಗೋಪಾಲಾಚಾರ್, ಬಿ.ಸಿ. ನಂಜುಂಡಯ್ಯ, ಮಾಲಿ ಮರಿಯಪ್ಪ ಮುಂತಾದ ಮುಖಂಡರುಗಳು ಜಿಲ್ಲೆಯಾದ್ಯಂತ ಸಂಚರಿಸಿ ಜನಜಾಗೃತಿಯನ್ನುಂಟು ಮಾಡುತ್ತಿದ್ದರು. ೧೯೩೭ ಅಕ್ಟೋಬರ್‌ನಲ್ಲಿ ಮೈಸೂರು ಕಾಂಗ್ರೆಸ್ ಸ್ಥಾಪನೆಯಾಯಿತು. ನಂತರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದು ಕಾಂಗ್ರೆಸ್ ಉಮೇದುವಾರರೆ ಆರಿಸಿ ಬರುವಂತಾಯಿತು. ೧೯೩೮ರ ಧ್ವಜ ಸತ್ಯಾಗ್ರಹದಲ್ಲಿ ಕುಣಿಗಲ್ ನಲ್ಲಿ ಕೆ.ವಿ. ಸುಬ್ರಹ್ಮಣ್ಯಸ್ವಾಮಿ, ಮಧುಗಿರಿಯಲ್ಲಿ ತಾರೇಗೌಡ, ತುಮಕೂರಿನಲ್ಲಿ ಬಿ.ಸಿ.ನಂಜುಂಡಯ್ಯ ಮುಂತಾದವರು ಸೆರೆಮನೆ ಸೇರಿದರು.

ಈ ವೇಳೆಗಾಗಲೇ ಟಿ. ಸುಬ್ರಹ್ಮಣ್ಯಂರವರನ್ನು ರಾಜದ್ರೋಹ ಆಪಾದನೆ ಮೇಲೆ ಬಂಧಿಸಿ ಸುಮಾರು ಎರಡು ವರ್ಷಗಳ ಕಾಲ ಕಠಿಣ ಶಿಕ್ಷೆಗೆ ಒಳಪಡಿಸಿದರು. ೧೯೩೯ರಲ್ಲಿ ಶಿರಾ ತಾಲೂಕನ್ನು ಕೇಂದ್ರವಾಗಿಟ್ಟುಕೊಂಡು ಸತ್ಯಾಗ್ರಹ ಶಿಬಿರವನ್ನೇರ್ಪಡಿಸಿ ಅರಣ್ಯ ಸತ್ಯಾಗ್ರಹವನ್ನು ಪ್ರಾರಂಭಿಸಲಾಯಿತು. ಇದರಿಂದ ೫೦೦ಕ್ಕೂ ಹೆಚ್ಚು ಮಂದಿ ಜೈಲು ಸೇರಿದರು. ಈ ಆಂದೋಲನ ದಲ್ಲಿ ಬಿ.ಸಿ.ನಂಜುಂಡಯ್ಯ, ವಿಠೋಬರಾವ್, ಎ.ಎಸ್. ರೇವಣ್ಣ, ಮಾಲಿ ಮರಿಯಪ್ಪ, ನೀಲಕಂಠರಾವ್ ಮುಂತಾದ ಅನೇಕರು ಭಾಗವಹಿಸಿದ್ದರು.

೧೯೪೧–೪೨ರ ಕ್ವಿಟ್ ಇಂಡಿಯಾ ಚಳವಳಿಯು ಮುಂಬಯಿ ಅಧಿವೇಶನದಲ್ಲಿ ಭಾಗಿಗಳಾಗಿ ಬರುವ ದಾರಿಯಲ್ಲಿ ಎಂ.ವಿ.ರಾಮರಾವ್, ಸುಬ್ರಹ್ಮಣ್ಯಂ, ನೀಲಕಂಠರಾವ್ ಮುಂತಾದವರ ಬಂಧನವಾಯಿತು. ಗಾಂಧೀಜಿಯವರ ಬಂಧನದ ಸುದ್ದಿ ಹಬ್ಬುತ್ತಿದಂತೆ ವಿದ್ಯಾರ್ಥಿಗಳು, ಕಾರ್ಮಿಕರು ತಮಗೆ ತಿಳಿದ ರೀತಿಯಲ್ಲಿ ಚಳವಳಿ ಮುಂದುವರಿಸಿದರು. ಆರ್. ಎಸ್. ಆರಾಧ್ಯ ಅವರು ಭೂಗತರಾಗಿ ಅನೇಕ ಕೈಬರೆಹದ ಪತ್ರಿಕೆಗಳನ್ನು ತಯಾರಿಸಿ ಹಂಚುತ್ತಿದ್ದರು. ಕ್ಯಾತಸಂದ್ರದಲ್ಲಿ ರೇಲ್ವೇ ಇಂಜನ್ ಉರುಳಿಸಲಾಯಿತು. ಅನೇಕ ಹೆಂಡದ ಲಾರಿಗಳನ್ನು ಸುಡಲಾಯಿತು. ತಿಪಟೂರು ರೇಲ್ವೆ ಸ್ಟೇಷನ್ ಸುಟ್ಟು ಹಾಕಿ ಗೋಡೌನ್‌ಅನ್ನು ಲೂಟಿ ಮಾಡಲಾಯಿತು ಮತ್ತು ಫೈರಿಂಗ್ ಆಗಿ ನೂರಾರು ಜನರನ್ನು ಬಂಧಿಸಲಾಯಿತು. ತುಮಕೂರಿನಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ನುಗ್ಗಿ ಜಡ್ಜ ಪೀಠದಲ್ಲಿ ಕುಳಿತು ಕೇಸು ಸಹ ಕೂಗಿಸಿದ ಕೆಚ್ಚೆದೆಯ ಟಿ.ಪಿ.ಕೃಷ್ಣಪ್ಪನವರ ಹೆಸರು ಮರೆಯಲಾಗದಂತಹುದು. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಗುಬ್ಬಿ ಎನ್. ಚನ್ನಬಸಪ್ಪನವರ ಬಂಧನವಾಯಿತು. ರೇಲ್ವೆ ಹಳಿ ಕೀಳುವುದು, ಟೆಲಿಫೋನ್ ತಂತಿ ಕೀಳುವುದು ಮುಂತಾದ ಚಳವಳಿ ಸಾಕಷ್ಟು ನಡೆದು ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿತ್ತು.



೧೯೪೭ ಚಳವಳಿಯಂತೂ ಅತ್ಯುಗ್ರವಾಗಿ ನಡೆದು ತುಮಕೂರು ಮಧುಗಿರಿಗಳಲ್ಲಿ ಗೋಲಿಬಾರ್ ಸಹ ಆಗಿ ಸುಮಾರು ೮೦೦ ಜನರ ಬಂಧನವಾಯಿತು. ಒಟ್ಟಿನಲ್ಲಿ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ತುಮಕೂರು ಜಿಲ್ಲೆಯ ಪಾತ್ರ ಸ್ತುತ್ಯಾರ್ಹ.

೧೯೩೧ರ ಅಕ್ಟೋಬರ್‌ನಲ್ಲಿ ತುಮಕೂರಿನಲ್ಲಿ ಪಾನನಿರೋಧ ಚಳವಳಿ ಆಯಿತು. ದಿನಕ್ಕೆ ನಾಲ್ವರಂತೆ ೧೨೦ ಜನ ಈ ಚಳವಳಿಯಲ್ಲಿ ಪಾಲುಗೊಂಡರು. ರಂಗಯ್ಯಂಗಾರ, ತಾಳಕೆರೆ ಸುಬ್ರಹ್ಮಣ್ಯ, ಬಿ.ಸಿ. ನಂಜುಂಡಯ್ಯ, ಎಂ.ಎನ್.ವಿಠೋಬರಾವ್, ಎ.ರೇವಣ್ಣ ಇವರು ಈ ಚಳವಳಿಯಲ್ಲಿ ಮುಖ್ಯರು. ಅನೇಕರ ಬಂಧನವಾಗಿ ತಲಾ ಎರಡು ತಿಂಗಳದ ಶಿಕ್ಷೆಯೂ ಅನೇಕರಿಗೆ ಆಯಿತು. ಗುಬ್ಬಿ ರಾಜಗೋಪಾಲಾಚಾರ್, ಹೇರೂರು ವೆಂಕಟರಾಮಯ್ಯ ಇವರಲ್ಲಿ ಸೇರಿದ್ದರು. ಆ ಕಾಲದಲ್ಲಿ ಇತರ ಕಡೆ ಕೂಡ ಚಳವಳಿ ಆರಂಭವಾಯಿತು. ಕುಣಿಗಲ್‌ನಲ್ಲಿ ಕೆ.ವಿ.ಸುಬ್ರಹ್ಮಣ್ಯಸ್ವಾಮಿ ಮುಖ್ಯರು. ಇಟಕದಿಬ್ಬನಹಳ್ಳಿ, ಮಿಡಿಗೇಶಿ, ಪಾವಗಡದಲ್ಲಿ ಖಾದಿ ಕೇಂದ್ರಗಳು ಉದ್ಘಾಟನೆಯಾದವು.

ತುರುವೇಕೆರೆ ಎಂ.ಎನ್.ಸೀತಾರಾಮಯ್ಯ ಗಣ್ಯರು, ಮುಂದೆ ಇವರು ಬೆಂಗಳೂರಿಗೆ ತೆರಳಿ ಪತ್ರಿಕೋದ್ಯಮಿಯಾದರು. ತುರುವೇಕೆರೆಯಲ್ಲಿ ಎಂ.ಎನ್.

ಸೀತಾರಾಮ ಅಯ್ಯಂಗಾರ ರಾಮಪುರಾಣಿಕ ಮುಖ್ಯರು, ಮಾಯಸಂದ್ರದಲ್ಲಿ ಎಂ.ಎನ್. ಶ್ರೀಕಂಠಯ್ಯ ಮುಖ್ಯ ಕಾರ್ಯಕರ್ತರು.

ತಿಪಟೂರು ಇನ್ನೊಂದು ಗಣ್ಯಕೇಂದ್ರ ಕೆ. ರಂಗಪ್ಪ ಇಲ್ಲಿ ಖಾದಿ ಭಂಡಾರವನ್ನು ೧೯೩೦ರಲ್ಲಿ ತೆರೆದರು. ೧೯೩೧ರಲ್ಲಿ ಸಾರಾಯಿ ಅಂಗಡಿ ಪಿಕೆಟಿಂಗ್ ಸಂಘಟಿಸಲು ರಂಗಪ್ಪ, ಲಿಂಗಪ್ಪ, ಎಲ್.ಸಿದ್ದಪ್ಪ ಪಾಲುಗೊಂಡರು. ಎಸ್.ಆರ್. ಮಲ್ಲಪ್ಪ ಇಲ್ಲಿನ ಇನ್ನೊಬ್ಬ ಗಣ್ಯರು (ಇವರನ್ನು ಸಿ.ರು.ಮ ಎಂದು ಕರೆಯುತ್ತಿದ್ದರು) ಡಿ.ಎಸ್. ಮಲ್ಲಪ್ಪನವರು ೧೯೩೭ರಲ್ಲಿ ಪ್ರಜಾಪಕ್ಷ ತ್ಯಜಿಸಿ ಕಾಂಗ್ರೆಸ್ ಸೇರಿದರು. (ಪ್ರಜಾಪಕ್ಷ ಕಾಂಗ್ರೆಸ್‌ನಲ್ಲಿ ಲೀನವಾಯಿತು).

ಚಿಕ್ಕನಾಯಕನಹಳ್ಳಿ ಸಿ.ಎಚ್.ಲಿಂಗದೇವರು, ಎಂ.ಎನ್. ಹನುಮಂತ ರಾವ್ ಎನ್.ಡಿ.ವೆಂಕಟೇಗೌಡ, ಮುರುಡಯ್ಯ, ಸಿ.ಎನ್.ತಮ್ಮಯ್ಯ ಮುಖ್ಯ ಕಾರ್ಯಕರ್ತರು. ೧೯೪೩ರಲ್ಲಿ ಇಲ್ಲಿ ಒಂದು ವಿದ್ಯಾಪೀಠವನ್ನು ಸ್ಥಾಪಿಸಿದರು. ಜಿ.ವಿ.ನಾರಾಯಣಮೂರ್ತಿ ಇದರಲ್ಲಿ ದುಡಿಯುತ್ತಿದ್ದರು. ಶೆಟ್ಟಿಕೆರೆಯಲ್ಲಿ ಟಿ.ಕೆ.ಗಂಗಣ್ಣ ಗಣ್ಯರು.

೧೯೩೮ರ ಏಪ್ರಿಲ್‌ನಲ್ಲಿ ಮದ್ದೂರಬಳಿ ಶಿವಪುರದಲ್ಲಿ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನ ನೆರವೇರಿತು. ಈ ಕಾರ್ಯಕ್ರಮದಲ್ಲಿ ತ್ರಿವರ್ಣಧ್ವಜ ಹಾರಿಸಬಾರದೆಂಬ ಪ್ರತಿಬಂಧಕಾಜ್ಞೆ ಭಂಗಿಸಿ ಅಲ್ಲಿ ನಿತ್ಯ ಬಂಧನಗಳಾದವು. ಸಂಸ್ಥಾನದ ಎಲ್ಲೆಡೆ ಈ ಪ್ರತಿಬಂಧ, ಮುರಿದು ಧ್ವಜಾಸತ್ಯಾಗ್ರಹ ನಡೆಸಲು ಕರೆಕೊಟ್ಟರು. ತುಮಕೂರಿನಲ್ಲಿ ಇತರ ಕಡೆಯಲ್ಲೂ ಧ್ವಜ ಸತ್ಯಾಗ್ರಹ ನಡೆಸಿ ಅನೇಕರ ಬಂಧನವಾಯಿತು. ಕೊರಟಗೆರೆಯಲ್ಲಿ ಸೋಂಪುರದ ಎಸ್. ಹನುಮಂತರಾಯರ ನೇತೃತ್ವದಲ್ಲಿ ಸತ್ಯಾಗ್ರಹ ಮಾಡಿದ ನಾಲ್ವರ ಬಂಧನವಾಯಿತು. ಮಧುಗಿರಿಯಲ್ಲಿ ರಾಮಚೈತನ್ಯ, ತಾರೇಗೌಡ ಸತ್ಯಾಗ್ರಹ ಮಾಡಿ ಶಿಕ್ಷೆ ಅನುಭವಿಸಿದರು. ಶಿರಾದಲ್ಲಿ ಧ್ವಜ ಹಾರಿಸಿ ಬಂಧಿತರಾದರು. ಕರಿಸಿದ್ಧಪ್ಪ ತುಮಕೂರಿನಲ್ಲಿ ಬಿ.ಸಿ. ನಂಜುಂಡಯ್ಯ ಕೈದಾದರು. ಕುಣಿಗಲ್‌ನಲ್ಲಿ ಸುಬ್ರಹ್ಮಣ್ಯಸ್ವಾಮಿ ಇದೇ ರೀತಿ ಧ್ವಜಾಸತ್ಯಾಗ್ರಹ ಮಾಡಿದರು. ಅವರ ಜೊತೆ ೧೭ ಜನರ ಬಂಧನವಾಯಿತು. ಅವರಲ್ಲಿ ಕೆ.ವಿ.ಕೃಷ್ಣಸ್ವಾಮಿ,



ಸಿ.ಕೆ.ರಂಗಪ್ಪ, ಹುಚ್ಚಣ್ಣ, ಚಿಕ್ಕಣ್ಣ, ಕೆ. ನಂಜಯ್ಯ, ಯಜಮಾನ ಮರಿಯಪ್ಪ, ಸಂಜೀವಯ್ಯ ಮೊದಲಾದವರು ಸೇರಿದ್ದರು. ಕುಣಿಗಲ್‌ನ ಸಂಖ್ಯೆಯೇ ದೊಡ್ಡದು. ೧೭-೪-೧೯೩೮ರಂದು ಆದ ಈ ಬಂಧನದ ನಂತರ ಕುಣಿಗಲ್ ನಲ್ಲಿ ಮುಂದೆ ೧೮-೪-೧೯೩೮ರಂದು ೩೩ ಜನರ ಬಂಧನವಾಯಿತು. ಇವರಲ್ಲಿ ಬಿದನಗೆರೆಯ ರಾಮಣ್ಣಗೌಡರು ಇದ್ದರು. ಇವರಿಗೆಲ್ಲಾ ಎರಡು ವಾರದಿಂದ ಆರೂ ವಾರಗಳವರೆಗೆ ಶಿಕ್ಷೆ ಆಯಿತು.

ಶಿವಪುರ ಸತ್ಯಾಗ್ರಹದ ನಂತರ ಏಪ್ರಿಲ್‌ನಲ್ಲಿ ವಿದುರಾಶ್ವತ್ಥ ದುರಂತವಾಯಿತು. ಕೋಲಾರ ಜಿಲ್ಲೆಯ ಈ ಊರಲ್ಲಿ ಧ್ವಜ ಸತ್ಯಾಗ್ರಹವನ್ನು ಜಾತ್ರೆಯ ಕಾಲಕ್ಕೆ ನಡೆಸಿದಾಗ ಗೋಳಿಬಾರಾಗಿ ೧೦ ಜನ ಸತ್ತರು. ಇದರಿಂದ ರಾಜ್ಯದಲ್ಲಿ ಅಪೂರ್ವ ಜನಜಾಗೃತಿ ಆಯಿತು. ಎಲ್ಲ ತಾಲ್ಲೂಕು ಗಳಲ್ಲಿ ಕಾಂಗ್ರೆಸ್ ರೈತ ಸಮ್ಮೇಳನ ನಡೆಯಿತು. ರೈತರ ಸಮಸ್ಯೆಗಳನ್ನು ಎತ್ತಿ ಹೇಳಿತು. ಜವಾಬ್ದಾರಿ ಸರಕಾರಕ್ಕಾಗಿ ಚಳವಳಿ ನಡೆಸಲಾಯಿತು.

೧೯೩೯ ಸೆಪ್ಟಂಬರ್ ೧ ರಂದು ಟಿ. ಸಿದ್ಧಲಿಂಗಯ್ಯ ಮತ್ತು ಕೆ. ಹನುಮಂತಯ್ಯ ತುಮಕೂರಿನಲ್ಲಿ ಬಂಧಿತರಾದರು. ಗ್ರಾಮಾಂತರ ಪ್ರದೇಶಗಳಲ್ಲಿ ಈ ಚಳವಳಿಯಲ್ಲಿ ನೂರಾರು ರೈತರು ಸತ್ಯಾಗ್ರಹ ನಡೆಸಿದರು. ಒಂದು ಲೆಕ್ಕದಂತೆ ೪೭೦ ಜನ ಆಗ ಜಿಲ್ಲೆಯಲ್ಲಿ ಬಂಧಿತರಾಗಿ ಶಿಕ್ಷೆಗೆ ಒಳಗಾದರು. ತಾಲೂಕು ಕೇಂದ್ರಗಳಲ್ಲಿ ಸತ್ಯಾಗ್ರಹ ಬಲವಾಗಿತ್ತು. ಅದೇ ವರ್ಷ ತಾಳಕೆರೆ ಸುಬ್ರಹ್ಮಣ್ಯ ಅವರು ರಾಜದ್ರೋಹದ ಆಪಾದನೆ ಎದುರಿಸಿ ಜೈಲು ಕಂಡಿದ್ದರು.

ಈ ಕಾಲದಲ್ಲಿ ಆರ್.ಎಸ್.ಆರಾಧ್ಯರು ಗುಪ್ತವಾಗಿ “ತ್ರಿಶೂಲ” “ಕ್ರಾಂತಿ” “ಸಮರ” “ಕಹಳೆ” ಮುಂತಾದ ಹೆಸರಿನ ಸೈಕ್ಲೋಸ್ಟೈಲ್ ಮಾಡಿದ ಬುಲೆಟಿನ್ ಹೊರಡಿಸುತ್ತಿದ್ದರು. ಎರಡು ತಿಂಗಳ ನಂತರ ಇವರ ಬಂಧನವಾಗಿ ಆರು ತಿಂಗಳ ಶಿಕ್ಷೆ ಆಯಿತು. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಇವರಿಗೆ ನಿಲುವು ಬೇಡಿಯ ಉಗ್ರ ಶಿಕ್ಷೆ ಆಗಿತ್ತು. ಸೋಂಪುರದ ವೀರಶೆಟ್ಟಪ್ಪ, ಉದ್ದಂಡಪ್ಪ, ಚಿಕ್ಕಹನುಮಯ್ಯ, ತಿಮ್ಮಾಬೋವಿ ಹಾಗೂ ಮಾವತ್ತೂರಿನ ಕೆ.ಎಂ. ಶಿವಣ್ಣ ತಾವರೆಕೆರೆಯಲ್ಲಿ ಸತ್ಯಾಗ್ರಹ ಮಾಡಿದ್ದರು. ನೂರಾರು ಜನರನ್ನು ಬಂಧಿಸಿ ವಾಹನದಲ್ಲಿ ತುಂಬಿ ದೂರ ಅರಣ್ಯದಲ್ಲಿ ಪೊಲೀಸರು ಬಿಟ್ಟು ಬರುತ್ತಿದ್ದರು.

ಜವಾಬ್ದಾರಿ ಸರಕಾರಕ್ಕಾಗಿ ನಡೆಸಿದ ಚಳವಳಿಗಳು ತುಮಕೂರು, ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಉಗ್ರವಾಗಿದ್ದು ತುಮಕೂರು ಜಿಲ್ಲೆ ಎಲ್ಲರಿಗಿಂತ ಮುಂದಿತ್ತು. ಮುಂದೆ ಕೆ.ಜಿ.ಎಫ್.ನಲ್ಲಿ ನಡೆದ ಚಿನ್ನದ ಗಣಿ ಸತ್ಯಾಗ್ರಹಕ್ಕೆ ಜಿಲ್ಲೆಯಿಂದ ೧೫೧ ಜನ ಕಾಲ್ನಡಿಗೆಯಿಂದ ಹೋಗಿ ಬಂಧಿತರಾದರು. ಇವರಲ್ಲಿ ಕೆ. ಹೆಂಜೇರಪ್ಪನವರೂ ಸೇರಿದ್ದು ಅವರಿಗೆ ಮೂರು ತಿಂಗಳು ಶಿಕ್ಷೆ ಆಯಿತು. ಅವರ ವಕೀಲಿ ಸನದು ಒಂದು ವರ್ಷ ರದ್ದಾಯಿತು.

೧೯೩೯ರಲ್ಲಿ ನಡೆದ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ೧೩ ಸ್ಥಾನಗೆದ್ದು ಅಧ್ಯಕ್ಷ, ಉಪಾಧ್ಯಕ್ಷ ಪದವಿ ಪಡೆಯಿತು. ೧೯೪೦ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಜಿಲ್ಲೆಯ ೨೫ರಲ್ಲಿ ೨೦ ಸ್ಥಾನ ಸ್ಥಾನ ಪಡೆಯಿತು. ೧೯೪೪ರಲ್ಲಿ ನಡೆದ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ೨೧ ರಲ್ಲಿ ೧೭ ಸ್ಥಾನ ಗೆದ್ದಿತು.

ಕ್ವಿಟ್ ಇಂಡಿಯಾ ಚಳವಳಿ (೧೯೪೨) ಆರಂಭ ಆದಾಗ ಪೇಟೆ, ಪಟ್ಟಣಗಳ ವಿದ್ಯಾರ್ಥಿಗಳೂ ಭಾರಿ ಸಂಖ್ಯೆಯಲ್ಲಿ ಪಾಲುಗೊಂಡರು. ಆಗ ತಾಳಕೆರೆ ಸುಬ್ರಹ್ಮಣ್ಯ ಮೈಸೂರು ಕಾಂಗ್ರೆಸ್ ಅಧ್ಯಕ್ಷರು. ಮುಂಬೈ ಎ.ಐ.ಸಿ.ಸಿ.ಗೆ ಹೋಗಿದ್ದ ಅವರು ಬೆಂಗಳೂರಿಗೆ ಮರಳುತ್ತಿದ್ದಂತೆ ಯಶವಂತಪುರ ರೈಲು ನಿಲ್ದಾಣದಲ್ಲಿ ಆಗಸ್ಟ್ ೧೨ ರಂದು ಬಂಧಿತರಾದರು. ಅವರ ಜೊತೆ ನಿಜಲಿಂಗಪ್ಪ ಮುಂತಾದ ಗಣ್ಯ ನಾಯಕರನ್ನು ಅಲ್ಲೇ ಬಂಧಿಸಿದರು.

ಆಗಸ್ಟ್ ೮, ೧೯೪೨ ರಾತ್ರಿ ಗಾಂಧೀಜಿ ಬಂಧನವಾದ ವಾರ್ತೆ ಎಲ್ಲೆಡೆ ತಲ್ಲಣವನ್ನುಂಟು ಮಾಡಿತು. ಆಗಸ್ಟ್ ೧೦ ಸೋಮವಾರ ಎಲ್ಲೆಡೆ ವಿದ್ಯಾರ್ಥಿಗಳು ಮುಷ್ಕರ ಹೂಡಿದರು. ಮಧುಗಿರಿಯಲ್ಲಿ ಹರತಾಳ ಸಭೆಗಳಾಗಿ ಅದೇ ದಿನ ಹಂಜೇರಪ್ಪ ಮಾಲಿ ಮರಿಯಪ್ಪ ಬಂಧಿತರಾದರು. ವಿದ್ಯಾರ್ಥಿಗಳ ಪ್ರತಿಭಟನೆ ಸಾಗಿತು.

ಆಗಸ್ಟ್ ೧೦ ರಂದು ತುಮಕೂರಲ್ಲಿ ವಿದ್ಯಾರ್ಥಿಗಳು ಹರತಾಳ ಆಚರಿಸಿ ಸಭೆ ಸೇರಿದರು. ಆಗ ಅಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದ ತ.ರಾ.ಸು. (ಮುಂದೆ ಪ್ರಖ್ಯಾತ ಕಾದಂಬರಿಕಾರರು) ಭಾಷಣ ಮಾಡಿ ಬಂಧಿತರಾದರು. ತುಮಕೂರು



ಆರ್.ಎಸ್. ಆರಾಧ್ಯರು ಬಂಧಿತರಾಗದೆ ಬೆಂಗಳೂರಿನ ಕೇಂದ್ರ ಸಮಿತಿಯ ಜೊತೆ ಸಂಪರ್ಕವಿರಿಸಿ ಹಲವು ಜಿಲ್ಲೆಗಳಲ್ಲಿ ಓಡಾಡಿ ಚಳವಳಿ ಸಂಘಟಿಸಿದರು. ಅನಂತರ ನಾರಾಯಣರಾವ್ ಎಂಬುವರು ವಿದ್ಯಾರ್ಥಿ ನಾಯಕರಾದರು. ಬನಾರಸ್‌ನಲ್ಲಿ ಓದುತ್ತಿದ್ದ ಬಿಳಿಗಿರಿಯವರೂ ಬಂದು ವಿದ್ಯಾರ್ಥಿ ನಾಯಕತ್ವ ವಹಿಸಿದರು. ತಿಪಟೂರಿನ ಡಿ.ಎಂ.ಚಂದ್ರಶೇಖರ್ ಕಲ್ಕತ್ತಾದಲ್ಲಿ ಓದುತ್ತಿದ್ದವರು ಓದು ತ್ಯಜಿಸಿ ತಮ್ಮ ಊರಿಗೆ ಬಂದು ಚಳವಳಿ ಸಂಘಟಿಸಿದರು. (ಇವರು ಸ್ವಾತಂತ್ರ್ಯಾನಂತರ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದರು)

ಆಗಸ್ಟ್ ೧೧, ೧೨, ೧೩ ರಂದು ತುಮಕೂರು ಸಹಿತ ಎಲ್ಲಾ ಪಟ್ಟಣಗಳಲ್ಲಿ ಶಾಲೆ ಕಾಲೇಜು ಮುಷ್ಕರ ಅಂಗಡಿಗಳ ಬಂದ್, ಮೆರವಣಿಗೆ ಸಭೆ ನಡೆದವು. ಆಗಸ್ಟ್ ೧೨ ರಂದು ತುಮಕೂರಿನ ಇಂಟರ್‌ಮೀಡಿಯಟ್ ಕಾಲೇಜು ಸೇರಿದಂತೆ ಎಲ್ಲಾ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಹೊರಗುಳಿದು ಮೆರವಣಿಗೆ ಸಭೆ ನಡೆಸಿದರು. ಮದ್ರಾಸ್ ಹೊಟೇಲಿನಲ್ಲಿ ಸಾರ್ವಜನಿಕ ಸಭೆ ಆಯಿತು. ಆಗಸ್ಟ್ ೧೩ರಂದು ತುಮಕೂರಿನಲ್ಲಿ ವಿದ್ಯಾರ್ಥಿಗಳು ಕಾರ್ಮೆಲ್ ಸ್ಕೂಲ್ ಬಳಿ ಒಟ್ಟುಗೂಡಿ ಹಾದಿಹೋಕರ ಹ್ಯಾಟ್ ಮತ್ತು ಟಾಯ್‌ಗಳನ್ನು ಕಸಿದು ಸುಟ್ಟರು. ಸಂಜೆ ಮೆರವಣಿಗೆ ನಡೆಸಲು ಆಗ ಪುರಸಭಾ ಅಧ್ಯಕ್ಷರಾಗಿದ್ದ ಎಂ.ವಿ.ರಾಮರಾವ್ ಭಾಷಣ ಮಾಡಿದರು. ಇದೇ ಕಾಲಕ್ಕೆ ಕೊರಟಗೆರೆ, ಬ್ಯಾಲ್ಯ, ಮಧುಗಿರಿ, ಶಿರಾ, ತಿಪಟೂರು, ಕುಣಿಗಲ್, ಚಿಕ್ಕನಾಯಕನಹಳ್ಳಿ, ಗುಬ್ಬಿ, ಅಮೃತೂರು, ಕ್ಯಾತ್ಸಂದ್ರ ಇಲ್ಲೆಲ್ಲ ಸಭೆ ಮೆರವಣಿಗೆ ನಡೆಯುತ್ತಲೇ ಇದ್ದವು.

ತುಮಕೂರಿನ ಖಾದಿ ಭಂಡಾರದ ನಂಜಪ್ಪನವರೂ, ಕೆ.ವಿ. ಸುಬ್ರಹ್ಮಣ್ಯ ಸ್ವಾಮಿಯವರನ್ನೂ ಸೈಕ್ಲೋಸ್ಟೈಲ್ ಮಾಡಿ ಬುಲೆಟಿನ್ ಪ್ರಕಟಿಸುತ್ತಿದ್ದ ಆರ್. ಎಸ್. ಆರಾಧ್ಯರು ಎಲ್ಲೆಡೆ ಅದರ ವಿತರಣೆ ವ್ಯವಸ್ಥೆ ಮಾಡುತ್ತಿದ್ದರು. ಈ ಗುಪ್ತ ವಿತರಣಾ ಕಾರ್ಯದಲ್ಲಿ ಮಹಿಳೆಯರೂ, ವಿದ್ಯಾರ್ಥಿನಿಯರೂ ನೆರವಾಗುತ್ತಿದ್ದರು. ಶೀಘ್ರವೆ ಕಾಂಗ್ರೆಸ್ ಬುಡಮೇಲು ಕೃತ್ಯಗಳನ್ನು ಕೈಗೊಳ್ಳಲು ನಿರ್ಣಯಿಸಿ ಕೈಬಾಂಬುಗಳನ್ನು ಮುಂತಾದ ಚಟುವಟಿಕೆಗಳು ಆರಂಭ ಆದವು. ತುಮಕೂರಿನ ವರ್ತಕರೂ ವಿದ್ಯಾರ್ಥಿಗಳೂ ವಿಶೇಷ ಸಹಕಾರ ನೀಡಿದರು. ತುಮಕೂರಿನ ಟಿ.ಎನ್. ಕೆಂಪಹೊನ್ನಯ್ಯ ಹಾಗೂ ಟಿ. ಅನಂತರಾಮ ಶೆಟ್ಟಿ ಅವರನ್ನು ಚಳುವಳಿಗೆ ಬೆಂಬಲ ನೀಡಿದ್ದಕ್ಕೆ ಬಂಧಿಸಿದರು.

ಗಾಂಧೀಜಿಯವರ ಆಪ್ತಕಾರ್ಯದರ್ಶಿ ಮಹಾದೇವಭಾಯಿ ದೇಸಾಯಿ ಅವರು ಆಗಸ್ಟ್ ೧೫, ೧೯೪೨ರಂದು ನಿಧನರಾದ ವಾರ್ತೆ ಎಲ್ಲೆಡೆ ಹರಡಿ ಚಳುವಳಿ ಉಗ್ರರೂಪ ತಾಳಿತು. ಆಗಸ್ಟ್ ೧೫ರಂದು ಪ್ರದರ್ಶನಕಾರರು ತುಮಕೂರು ಮುನ್ಸಿಫಲ್ ಕೋರ್ಟ ಮುಂದೆ ಪ್ರದರ್ಶನ ನಡೆಸಿದ ರಲ್ಲದೆ ಕೋರ್ಟ ಒಳಗಡೆ ನುಗ್ಗಿ ಮುನ್ಸಿಫಲ್ ಪೀಠದ ಮೇಲೂ ಕುಳಿತರು. ಹೆಗ್ಗೆರೆ ಮತ್ತು ಗೂಳೂರುಗಳಲ್ಲಿ ಸೇಂದಿ ಅಂಗಡಿಗಳಿಗೆ ಬೆಂಕಿ ಇಟ್ಟರು. ತಿಪಟೂರಿನಲ್ಲಿ ಆ ದಿನ ಭಾರೀ ಸಭೆ ಆಯಿತು. ಕೊರಟಗೆರೆ ತಾಲೂಕು ಕಛೇರಿಯ ಮೇಲೆ ಅದೇ ದಿನ ತ್ರಿವರ್ಣ ಧ್ವಜ ಹಾರಿಸಿದರು.

ಮಹಾದೇವ ದೇಸಾಯಿಯವರ ನಿಧನಕ್ಕೆ ಪ್ರತಿಕ್ರಿಯೆಯಾಗಿ ೧೭ರಂದು ತುಮಕೂರಿನಲ್ಲಿ ಒಂದೇ ದಿನ ಮೂರು ಮೆರವಣಿಗೆಗಳಾದವು. ಮಧ್ಯಾಹ್ನ ಆದ ಮೆರವಣಿಗೆಯಲ್ಲಿ ಒಂದು ಸಾವಿರ ಜನ ಪಾಲುಗೊಂಡಿದ್ದರು. ಶೇಷಮ್ಮ ಸುಬ್ರಹ್ಮಣ್ಯ ಸ್ವಾಮಿಯವರ ನೇತೃತ್ವದಲ್ಲಿ ಮಹಿಳೆಯರದ್ದೇ ಒಂದು ಮೆರವಣಿಗೆ ಆಯಿತು. ಸಂಜೆ ೬೦೦ ಜನ ಇದ್ದ ಇನ್ನೊಂದು ಮೆರವಣಿಗೆ ಆಗಿ ೪೦೦೦ ಜನ ಹಾಜರಿದ್ದ ಭಾರೀ ಸಭೆಯಾಗಿ ಮಹಾದೇವ ದೇಸಾಯಿ ಅವರ ನಿಧನಕ್ಕೆ ಸಂತಾಪ ಸೂಚಿಸಿದರು. ಶ್ರೀಕಂಠಪ್ಪ ಹಾಗೂ ನೀಲಕಂಠ ರಾವ್ ಇಲ್ಲಿ ಭಾಷಣ ಮಾಡಿದರು. ದಿನಾಂಕ ೧೭ರಂದು ಬಾಣಾವರದ ರೈಲು ನಿಲ್ದಾಣಕ್ಕೆ ಅಗ್ನಿಸ್ಪರ್ಶನವಾಯಿತು. ಅದೇ ರೀತಿ ತಿಪಟೂರಿನಲ್ಲಿ ೧೮ರಂದು ಭಾರಿ ಗಲಾಟೆ ಆಗಿ ತಿಪಟೂರು ರೈಲು ನಿಲ್ದಾಣ ಜಖಂ ಆಯಿತು.

ತಿಪಟೂರಿನಲ್ಲಿ ವಿದ್ಯಾರ್ಥಿಗಳ ಸಂಘಟನೆ ಬಲವಾಗಿತ್ತು. ದಿನಾಂಕ ೧೮, ೧೯೪೨ರಂದು ಮೆರವಣಿಗೆ ನಡೆಸಿ ವಿದ್ಯಾರ್ಥಿ ಮತ್ತು ರೈತರನ್ನು ಒಳಗೊಂಡ ಗುಂಪು ರೈಲು ನಿಲ್ದಾಣದ ಬಳಿಗೆ ಬಂತು. ವಿದ್ಯಾರ್ಥಿಗಳು ರೈಲು ನಿಲ್ಲಿಸಲು ಯತ್ನಿಸಿದಾಗ ರೈಲಿನಲ್ಲಿ ಒದ್ದ ಒಬ್ಬ ಐರೋಪ್ ಸೈನಿಕ ಗುಂಡು ಹಾರಿಸಿದ. ರೈಲು ಮುಂದೆ ಸಾಗಿತು. ಆದರೆ ರೊಚ್ಚಿಗೆದ್ದ ಜನ ಸ್ಟೇಷನ್‌ಗೆ ಕೊಳ್ಳಿ ಇಟ್ಟರು. ಅಲ್ಲಿದ್ದ ಗೂಡ್ಸ್ ಬಂಡಿಗಳು ಭಸ್ಮವಾದವು. ತಿಪಟೂರು ಸನಹದ ಮಾರನಗೇರಿಯ ರೈತ ಸಿದ್ದಪ್ಪ ಗುಂಡೇಟಿನಂದ ತೀರಿಕೊಂಡ. ಸಂಜೆ ಪೊಲೀಸರು ೪೨ ಜನರನ್ನು ಬಂಧಿಸಿದರು. ದಿನಾಂಕ ೧೯, ೧೯೪೨ರಂದು ತುಮಕೂರಿನಲ್ಲಿ ಭಾರೀ ಸಾರ್ವಜನಿಕ ಸಭೆ ಆಯಿತು. ೫೦೦೦ ಜನರಿದ್ದ ಈ ಸಭೆಯಲ್ಲಿ ಶ್ರೀಕಂಠಪ್ಪ, ನಾರಾಯಣರೆಡ್ಡಿ, ಬಿ. ಸಿ. ನಂಜುಂಡಯ್ಯ ಹಾಗೂ ಬೆಜವಾಡ ರಾಮಮೂರ್ತಿ ಭಾಷಣ ಮಾಡಿದರು. ಮರುದಿನವೂ ಇದೇ ರೀತಿ ಸಭೆ ಆಯಿತು. ಆಗಸ್ಟ್ ೧೯ರಂದು ಸುಗೂರು, ಅಣ್ಣಪುರ ಹಾಗೂ ಆಗಸ್ಟ್ ೧೦ರಂದು ಬಿದರಗುಂಡಿ ಸೇಂದಿ ಅಂಗಡಿಗಳ ಮೇಲೆ ಚಳುವಳಿಗಾರರ ಆಕ್ರಮಣ ಜಿಲ್ಲೆಯಲ್ಲಿ ವ್ಯಾಪಕವಾಗಿ ಆಯಿತು. ಆಗಸ್ಟ್ ೨೧ ರಂದು ಮಧುಗಿರಿ ತಾಲೂಕು ನಿಟ್ರಹಳ್ಳಿಯಲ್ಲಿ ಹೆಂಡದಂಗಡಿ ಸುಟ್ಟರು. ಶಿರಾ, ಮಧುಗಿರಿ, ಗುಬ್ಬಿಗಳಲ್ಲಿ ತಾಲ್ಲೂಕು ಕಚೇರಿ ಮುಂದೆ ಪಿಕೆಟಿಂಗ್ ಆಯಿತು. ಕಳ್ಳಂಬೆಳ್ಳ, ಬಿದರಗುಂಡಿ ಸೇಂದಿ ಅಂಗಡಿಗಳು ನಾಶವಾದವು. ಮುಂದೆ ಆಗಸ್ಟ್ ೨೧, ೨೨ ರಂದು ಕೆಸ್ತೂರು, ದೇವಲಾಪುರ, ಅಗಳಕೋಟೆ, ಬಿಟ್ಟನಕುರ್ಕಿಗಳ ಹೆಂಡದ ಅಂಗಡಿ ಧ್ವಂಸ ಮಾಡಿದರು. ಚಿಕ್ಕನಾಯಕನಹಳ್ಳಿಯಲ್ಲಿ ೨೦ರಂದು ಮೆರವಣಿಗೆ ಆಯಿತು. ಅರ್ತಿ ಆದಿರಾಜಯ್ಯ, ರೇವಣ್ಣ ಇವರನ್ನು ಆಗಸ್ಟ್ ೨೨ ರಂದು ತುಮಕೂರಿನಲ್ಲಿ ಬಂಧಿಸಿದರು. ಬುಕ್ಕಾಪಟ್ಟಣ, ಪಟ್ಟಗಾನಹಳ್ಳಿ, ತುಂಬಾಡಿ, ಮಾವತ್ತೂರು, ಆಲ್ಲೇನಹಳ್ಳಿ, ವೆಂಕಟಾಪುರ, ಬ್ಯಾಲ್ಯಾ ಇಲ್ಲೆಲ್ಲಾ ೨೩, ೨೪ ರಂದು ಹೆಂಡದಂಗಡಿ ಸುಟ್ಟರಲ್ಲದೆ, ಕೆಲವೆಡೆ ಹೆಂಡ ಸಾಗಿಸುತ್ತಿದ್ದ ವಾಹನಗಳನ್ನು ಉರುಳಿಸಿದರು. "ವಿದ್ಯಾರ್ಥಿಗಳು ಪಾಲುಗೊಳ್ಳುತ್ತಿರುವುದರಿಂದ ಚಳವಳಿ ಜಿಲ್ಲೆಯಲ್ಲಿ ಬಲವಾಗಿದೆ" ಎಂದು ಜಿಲ್ಲಾ ಪೊಲೀಸ್ ಅಧಿಕಾರಿ ಜಿಲ್ಲಾಧಿಕಾರಿಗೆ ಬರೆದ ಪತ್ರದಲ್ಲಿ ಹೇಳಿದೆ. ಆಗಸ್ಟ್ ೩೦, ೧೯೪೨ರಂದು ತುಮಕೂರಿನಲ್ಲಿ ನಡೆದ ಸಭೆಯಲ್ಲಿ ಬಿ.ಸಿ. ನಂಜುಂಡಯ್ಯ ಮಾತನಾಡಿದರೆ, ಆಗಸ್ಟ್ ೩೧ ರಂದು ಸರೋಜಮ್ಮ, ಅಮೃತಾಬಾಯಿ ಎಂಬ ವಿದ್ಯಾರ್ಥಿನಿಯರು ಮಾತಾಡಿದರು. ಶಿರಾದಲ್ಲೂ ವಿದ್ಯಾರ್ಥಿಗಳ ಪಿಕೆಟಿಂಗ್ ಸಾಗಿತು.

ಸೆಪ್ಟಂಬರ್ ೧ರಂದು ಬಿ.ಸಿ.ನಂಜುಂಡಯ್ಯ, ಸುಬ್ರಹ್ಮಣ್ಯ ಸ್ವಾಮಿ ಸಹಿತ ೧೪ ಜನರನ್ನು ತುಮಕೂರಿನಲ್ಲಿ ಬಂಧಿಸಿದರು. ಬಿ.ಸಿ. ನಂಜುಂಡಯ್ಯ ಅವರ ಬಂಧನ ಪ್ರತಿಭಟಿಸಿ ಆದಿನ ಭಾರಿ ಮೆರವಣಿಗೆ ಆಯಿತು. ಸೆಪ್ಟಂಬರ್ ೧೦ರವರೆಗೆ ತುಮಕೂರಿನಲ್ಲಿ ಪ್ರತಿನಿತ್ಯ ವಿದ್ಯಾರ್ಥಿಗಳ ಸಭೆ ಸಾಗಿತು. ಆದರೆ ಸೆಪ್ಟಂಬರ್ ಕೊನೆಯ ಹೊತ್ತಿಗೆ ಚಳವಳಿ ಕುಗ್ಗಿತು. ತಿಪಟೂರಿನಲ್ಲಿದ್ದ ವಿದ್ಯಾರ್ಥಿ

ಟಿ.ಕೆ.ಗೋವಿಂದರಾಜು (ಓಬಳಯ್ಯ) ನಂಜೇಗೌಡ, ಕೇಶವ ಮೂರ್ತಿ ಬಂಧಿತರಾದರು. ಸರ್ಕಾರಿ ನೌಕರರ ಮಕ್ಕಳು ಶಾಲೆ ಕಾಲೇಜುಗಳಿಗೆ ತಪ್ಪದೆ ಹೋಗುವಂತೆ ನೋಡಿಕೊಳ್ಳಬೇಕೆಂದು ಸರ್ಕಾರ ನೌಕರರಿಗೆ ತಾಕೀತು ಮಾಡಿತು. ಮುಷ್ಕರ ನಿಂತಾಗ ಸರ್ಕಾರ ಎಲ್ಲಾ ಬಂಧಿತ ವಿದ್ಯಾರ್ಥಿ ಗಳನ್ನು ಬಿಡುಗಡೆ ಮಾಡಿತು. ಆದರೆ ಸರಕಾರದ ಕುತಂತ್ರಗಳಿಂದ ಚಳವಳಿ ಬಗ್ಗೆ ವಿದ್ಯಾರ್ಥಿಗಳಲ್ಲಿ ಆದ ಅಸಮಾಧಾನ ಹೀಗೆ ಪ್ರಕಟವಾಯಿತು. ದಿನಾಂಕ ೧೦–೧೨–೧೯೪೨ರಂದು ಕೋಟೆ ಬಾಲಕರ ಶಾಲೆಯ ಪೀಠೋಪಕರಣಗಳಿಗೆ ಬೆಂಕಿ ಹಾಕಿದರು. ಅದೇ ದಿನ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಸ್ಫೋಟ ಆಯಿತು. ೧೫–೧೨–೧೯೪೨ರಂದು ಕಾಲೇಜಿನ ಹಿಂಭಾಗದ ಹುಲ್ಲಿನ ಮೆದೆಗೆ ಬೆಂಕಿ. ಈ ಸಂಬಂಧ ಖಾದಿ ಭಂಡಾರದ ಎಸ್. ರಾಮಚಂದ್ರರಾವ್ ಬಂಧಿತರಾದರು.

ಗ್ರಾಮಾಂತರ ಪ್ರದೇಶದಲ್ಲಿ ಚಳವಳಿ ಉಗ್ರವಾಗಿತ್ತು. ಬ್ಯಾಲ್ಯ ಊರಿನಿಂದಲೇ ೪೦ ಜನ ಬಂಧಿತರಾಗಿದ್ದರು. ಆರ್. ಎಸ್. ಆರಾಧ್ಯರನ್ನು ಅಕ್ಟೋಬರ್ ೧೦ರಂದು ಬಂಧಿಸಿದಾಗ ಭೂಗತ ಚಳವಳಿ ನಿಂತಿತು. ತಿಪಟೂರಿನಲ್ಲಿ ನವೆಂಬರ್ ೬ಕ್ಕೆ ಡಿ.ಎಂ.ಚಂದ್ರಶೇಖರ, ೮ಕ್ಕೆ ಕೆ.ಎನ್. ರಂಗಪ್ಪ, ೯ಕ್ಕೆ ಎಲ್. ಸಿದ್ದಪ್ಪ ಬಂಧಿತರಾದರು. ಜಿಲ್ಲೆಯಲ್ಲಿ ಉಗ್ರವಾಗಿ ನಡೆಸಿದ ಭಾರೀ ಚಳವಳಿ ನವೆಂಬರ್‌ನಲ್ಲಿ ತಣ್ಣಗಾಯಿತು. ಬಹಳಷ್ಟು ನಾಯಕರು ಜೈಲಿನಲ್ಲಿದ್ದರು.

ಸ್ವಾತಂತ್ರ್ಯಾನಂತರ ಮೈಸೂರು ಚಲೋ ಚಳವಳಿಯ ಕಾಲಕ್ಕೆ ಇಡೀ ಜಿಲ್ಲೆಯಲ್ಲಿ ಜ್ವಾಲಾಮುಖಿ ಸ್ಫೋಟಿಸಿತು. ತುಮಕೂರಿನಲ್ಲಿ ವಿದ್ಯಾರ್ಥಿಗಳ ಮೆರವಣಿಗೆ ಆಗಿ ಗೊರೂರು ರಾಮಸ್ವಾಮಿ ಅಯ್ಯಂಗಾರರ ಪುತ್ರ ಹತರಾದರು. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ತಾಲೂಕು ಕಚೇರಿ ಸುತ್ತ ಸಾವಿರಾರು ಜನ ಪಿಕೆಟಿಂಗ್ ನಡೆಸಿದರು. ಮಧುಗಿರಿಯಲ್ಲಿ ಗೋಲಿಬಾರಾಗಿ ಹಂದ್ರಾಳ ವೆಂಕಟಪ್ಪ ನಿಧನರಾದರು. ೧೯೪೭ರ ಚಳುವಳಿ ೪೨ ದಿನ ಸಾಗಿ ಮಹಾರಾಜರು ಸೆಪ್ಟಂಬರ್ ೨೪ಕ್ಕೆ ಜವಾಬ್ದಾರಿ ಸರಕಾರ ಸ್ಥಾಪಿಸಲು ಒಪ್ಪಿದಾಗ ನಿಂತಿತು.

ಆದರೆ ಈ ಚಳುವಳಿ ಸಂಸ್ಥಾನದಲ್ಲಿ ಮುಗಿಯುವಷ್ಟರಲ್ಲಿ ೨೦ ಜನ ಬಲಿಯಾಗಿದ್ದರು. ಸ್ವಾತಂತ್ರ್ಯ ಚಳವಳಿ ಜನಸಾಮಾನ್ಯರು ನಡೆಸಿದ ಅಗ್ರಗಣ್ಯ ತ್ಯಾಗ ಪರಿಶ್ರಮ ಬಲಿದಾನಗಳ ಫಲವಾಗಿದೆ. ತುಮಕೂರು ಜಿಲ್ಲಾ ಸ್ವಾತಂತ್ರ್ಯ



ಹೋರಾಟಗಾರರ ಸಂಘ ತುಮಕೂರು ಚಲೇಜಾವ್ ಚಳವಳಿ ೫೦ನೇ ವಾರ್ಷಿಕೋತ್ಸವದ ಅಂಗವಾಗಿ ಪ್ರಕಟವಾದ ಸ್ಮರಣ ಸಂಚಿಕೆ (೧೯೯೨) ಸಂಪಾದಕೀಯದಲ್ಲಿ ಭಾರತೀಯ ಸ್ವಾತಂತ್ರ್ಯ ಹೋರಾಟದ ಪಕ್ಷಿನೋಟವನ್ನು ನೀಡಿದ್ದಾರೆ.

ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿ ಹೋರಾಟ ಪ್ರಾರಂಭ ವಾದದ್ದೆ ೧೯೧೮ರಲ್ಲಿ. ಹಿಂದುಳಿದವರ ಪ್ರಗತಿಗಾಗಿ ಹೆಚ್. ಚನ್ನಯ್ಯನವರ ನೇತೃತ್ವದಲ್ಲಿ "ಪ್ರಜಾಮಿತ್ರ ಮಂಡಳಿ" ಅಸ್ತಿತ್ವಕ್ಕೆ ಬಂತು. ೧೯೧೮ ರಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವ ಮಾದರಿಯ ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ವಾದಿಸಿತಲ್ಲದೆ ತನ್ನ ಅಭಿಪ್ರಾಯವನ್ನು ಪ್ರಚಾರ ಮಾಡಲು ಪತ್ರಿಕೆಯೊಂದನ್ನು ಹೊರತಂದಿತು. ಇದರಲ್ಲಿ ಪ್ರಕಟವಾದ ಸುದ್ದಿಗಳಿಂದ ಉತ್ತೇಜಿತರಾದ ತುಮಕೂರು ಜಿಲ್ಲೆಯ ಕೆಲವು ಯುವಕರು ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದ ತಿಪಟೂರಿನ ಡಿ.ಎಸ್. ಮಲ್ಲಪ್ಪನವರ ನೇತೃತ್ವದಲ್ಲಿ ಹೋರಾಟಕ್ಕೆ ಧುಮುಕಿದರು. ಜಿಲ್ಲೆಯಲ್ಲಿ ತಮ್ಮದೇ ಆದ "ಪ್ರಜಾಪಕ್ಷ"ವೆಂಬ ಹೆಸರಿನ ಪಕ್ಷವೊಂದನ್ನು ಸ್ಥಾಪಿಸಿಕೊಂಡ ಡಿ.ಎಸ್. ಮಲ್ಲಪ್ಪನವರು ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯ ಮೊದಲ ನಾಯಕರಾಗಿದ್ದು, ಚನ್ನಪಟ್ಟಣ ಮತ್ತು ತುಮಕೂರಿನಲ್ಲಿ ಆ ಪಕ್ಷದ ಅಧಿವೇಶನವನ್ನು ನಡೆಸಿ, ಅದರಲ್ಲಿ ಜವಾಬ್ದಾರಿ ಸರಕಾರವನ್ನು ದಯಪಾಲಿಸುವಂತೆ ಮಹಾರಾಜರನ್ನು ಒತ್ತಾಯಿಸಿದರು. ಹೀಗೆ ತಿಪಟೂರಿನ ಡಿ.ಎಸ್. ಮಲ್ಲಪ್ಪನವರಿಂದ ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ನಾಂದಿ ಆಯಿತು. ೧೯೨೦ರಲ್ಲಿ ನಾಗಪುರದಲ್ಲಿ ನಡೆದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ "ಪ್ರಾಂತಿಯ ಕಾಂಗ್ರೆಸ್‌ಗಳ" ರಚನೆಗೆ ಅನುಮತಿ ನೀಡಿತು. ೧೯೨೧ರಲ್ಲಿ ರಾಜ್ಯಾದ್ಯಂತ ಅನೇಕ ಕಾಂಗ್ರೆಸ್ ಕಮಿಟಿಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ತುಮಕೂರು ಕಾಂಗ್ರೆಸ್ ಕಮಿಟಿ ಕೂಡ ಒಂದಾಗಿದ್ದು ಇದರ ಸಂಸ್ಥಾಪಕ ಅಧ್ಯಕ್ಷರಾಗಿ ಕೆ. ರಂಗಯ್ಯಂಗಾರ್ ಆಯ್ಕೆಗೊಂಡರೆ, ತಾಳಕೆರೆ ಸುಬ್ರಹ್ಮಣ್ಯ ಪ್ರಪ್ರಥಮ ಕಾರ್ಯದರ್ಶಿಯಾಗಿ ಜಿಲ್ಲೆಯಲ್ಲಿ ರಾಷ್ಟ್ರೀಯ ರಚನಾತ್ಮಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು.

೧೯೨೨ರಲ್ಲಿ ಗಯಾದಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ ತುಮಕೂರು ಜಿಲ್ಲೆ ಪರವಾಗಿ ಭಾಗವಹಿಸಿದ್ದ ಕೆ. ರಂಗಯ್ಯಂಗಾರರು ಅಧಿವೇಶನದಿಂದ ಹಿಂದಿರುಗಿದ ಮೇಲೆ ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕ್ರಮಗಳಾದ ಸತ್ಯಾಗ್ರಹ ಮತ್ತು ಅಸಹಕಾರ ಚಳುವಳಿಯ ಬಗ್ಗೆ ಪ್ರಚಾರ ಮಾಡುವ ಮೂಲಕ ಜಿಲ್ಲೆಯಲ್ಲಿ ಬ್ರಿಟಿಷ್‌ರ ವಿರುದ್ಧ ಜನಜಾಗೃತಿಯನ್ನುಂಟು ಮಾಡಿದರು. ತುಮಕೂರು ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಪಾನನಿರೋಧ, ಧ್ವಜ ಸತ್ಯಾಗ್ರಹ. ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿ ಮತ್ತು ಮೈಸೂರು ಚಲೋ ಚಳುವಳಿಗಳು ಪ್ರಮುಖವಾಗಿವೆ.

ಮೈಸೂರು ರಾಜ್ಯದಲ್ಲಿ ಸ್ವಾತಂತ್ರ್ಯ ಚಳವಳಿ ಪ್ರಾರಂಭವಾದದ್ದು ಬಹಳ ನಿಧಾನವಾಗಿ. ಅಂದಿನ ದಿನದಲ್ಲಿ ಮಹಾತ್ಮ ಗಾಂಧೀಜಿಯವರಿಗೆ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟದ ಅವಶ್ಯಕತೆ ಇಲ್ಲ ಎಂದು ಕಾಂಗ್ರೆಸ್ ಸ್ಥಾಪನೆಗೆ ಒಪ್ಪಿಗೆ ನಿಡಿರಲಿಲ್ಲ. ೧೯೨೬ರಲ್ಲಿ ಬೆಂಗಳೂರು ಬಿನ್ನಿಮಿಲ್ಲಿನ ನಡೆದ ಒಂದು ಗಲಭೆ ವಿಷಯ ೧೯೨೬ರಲ್ಲಿ ನಡೆದ ಪ್ರಜಾಪ್ರತಿ ನಿಧಿ ಸಭೆಯ ೪೫ನೇ ದಸರಾ ಅಧಿವೇಶನದಲ್ಲಿ ಮೈಸೂರು ಸಂಸ್ಥಾನದ ದಿವಾನರಾದ ಮಿರ್ಜಾ ಇಸ್ಮಾಯಿಲ್ ಅವರು ಮಾತನಾಡುತ್ತಾ ಸರ್ಕಾರದ ವಿರುದ್ಧ ಪ್ರತಿಭಟಿಸುವ ಫಲವನ್ನು ಯಾರಾದರೂ ಹಿಡಿಯುವುದಾದರೆ ಅದು ದೇಶದ ಏಳಿಗೆಗೆ ಕಲ್ಲೆಸೆದು ದ್ರೋಹ ಬಗೆದಂತೆ ಇಂತಹ ಕೃತ್ಯಗಳನ್ನು ಸರ್ಕಾರ ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಎಚ್ಚರಿಕೆಯ ರೀತಿಯಲ್ಲಿ ಮಹಾರಾಜರ ಎದುರಿಗೇ ಹೇಳಿದರು. ವಿದ್ಯಾಭ್ಯಾಸ ಬೆಳೆದಂತೆ ಮೈಸೂರು ರಾಜ್ಯದ ಪ್ರಜೆಗಳಿಗೆ ನಮ್ಮ ಮಹಾರಾಜರು ಸ್ವತಂತ್ರರಲ್ಲ ಅವರು ಬ್ರಿಟಿಷ್ ಆಳ್ವಿಕೆ ಅಡಿಯಲ್ಲೇ ತಮ್ಮ ರಾಜ್ಯಭಾರ ಮಾಡುತ್ತಿರುವುದು ಎಂದು ಮನವರಿಕೆ ಆದ ಮೇಲೆ ಮೈಸೂರು ರಾಜ್ಯದಲ್ಲೂ ಭಾರತದೇಶವನ್ನು, ಮೈಸೂರು ರಾಜ್ಯವನ್ನು ಬ್ರಿಟಿಷ್ ಮುಕ್ತ ಮಾಡಬೇಕೆಂದು ನಾವು ಸ್ವತಂತ್ರ ಭಾರತ ದೇಶದ ಪ್ರಜೆಗಳಾಗಬೇಕೆಂದು ಹಂಬಲಿಸತೊಡಗಿದರು.

ಸ್ವದೇಶಿ ಚಳವಳಿ ಅಂಗವಾಗಿ ವಿದೇಶಿ ವಸ್ತುಗಳ ಬಹಿಷ್ಕಾರ ಚಳುವಳಿಯನ್ನು ಬಿರುಸಿನಿಂದ ಆರಂಭಿಸಿದರು. ೧೯೨೯ರ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಕೈಕೊಂಡ ನಿರ್ಣಯಗಳಲ್ಲಿ ೧೯೩೦ ಜನವರಿ ೨೬ರಂದು ದೇಶಾದ್ಯಂತ ಸಂಪೂರ್ಣ ಸ್ವರಾಜ್ಯ ದಿನವನ್ನಾಗಿ ಆಚರಿಸುವುದು ಕೂಡ ಒಂದಾಗಿತ್ತು. ಆ ದಿನ ತುಮಕೂರಿನಲ್ಲೂ ತಾಳಕೆರೆ ಸುಬ್ರಹ್ಮಣ್ಯ ನೇತೃತ್ವದಲ್ಲಿ ರಾಷ್ಟ್ರಧ್ವಜ ಹಾರಿಸಿದ ಕಾಂಗ್ರೆಸ್ ಕಾರ್ಯಕರ್ತರು ಸಂಪೂರ್ಣ ಸ್ವರಾಜ್ಯ ದಿನವನ್ನು ಅರ್ಥವತ್ತಾಗಿ ಆಚರಿಸಿದರು.



ಮಹಾತ್ಮ ಗಾಂಧೀ ಸಂಘಟಿಸಿದ ಸತ್ಯಾಗ್ರಹಗಳಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಮುಖವಾದದ್ದು. ಮಹಾತ್ಮ ಗಾಂಧೀಯವರು ೧೯೩೦ ಮಾರ್ಚ್ ೧೨ರಂದು ಐತಿಹಾಸಿಕ ದಂಡಿಯಾತ್ರೆಯನ್ನು ಆರಂಭಿಸಿದರು. ಈ ಸತ್ಯಾಗ್ರಹವನ್ನು ಬೆಂಬಲಿಸಿ ತಾಳಕೆರೆ ಸುಬ್ರಹ್ಮಣ್ಯರವರು ತಮ್ಮ ಸಮೀಪವರ್ತಿಗಳಾದ ವೆಂಕಟರಾಮಯ್ಯ ಮತ್ತು ಎಲ್. ಕೃಷ್ಣಮೂರ್ತಿ ಅವರನ್ನು ತಮ್ಮ ಪರವಾಗಿ ದಂಡಿಗೆ ಕಳುಹಿಸಿಕೊಟ್ಟರು.

ಅಂಕೋಲಾದಲ್ಲಿ ಏರ್ಪಾಡಾಗಿದ್ದ ಉಪ್ಪಿನ ಸತ್ಯಾಗ್ರಹದಲ್ಲಿ ಜಿ. ಆರ್. ಚಂಗಲಾರಾಧ್ಯ, ಟಿ.ಎಲ್.ಸಂಗಪ್ಪ, ಗಮಲದಪ್ಪ, ಟಿ. ಆರ್. ಚನ್ನಪ್ಪ, ಪುಟ್ಟಯ್ಯ, ವಜ್ರಂಶೆಟ್ಟಿ ಅನೇಕ ಕಾರ್ಯಕರ್ತರು ತುಮಕೂರು ಜಿಲ್ಲೆಯಿಂದ ಭಾಗವಹಿಸಿದ್ದರು. ಇವರಲ್ಲಿ ಕೆಲವರು ಪೋಲೀಸರಿಂದ ಬಂಧಿಸಲ್ಪಟ್ಟು ಯರವಾಡ, ಕಾರವಾರ ಮತ್ತು ಬಿಜಾಪುರ ಸೆರೆಮನೆಗಳಲ್ಲಿ ಶಿಕ್ಷೆ ಅನುಭವಿಸಿದರು. ಗಾಂಧಿ ಇರ್ವಿನ್ ಒಪ್ಪಂದದ ನಂತರ ಸೆರೆಮನೆಯಿಂದ ಬಿಡುಗಡೆಯಾದ ಸುಬ್ರಹ್ಮಣ್ಯರವರು ತುಮಕೂರು ಸರ್ಕಾರಿ ಹೈಸ್ಕೂಲ ಮೈದಾನದಲ್ಲಿ ಬೃಹತ್ ಬಹಿರಂಗ ಸಭೆಯನ್ನು ಏರ್ಪಡಿಸಿ ಅದರಲ್ಲಿ ಗಾಂಧಿ ಇರ್ವಿನ್ ಒಪ್ಪಂದದ ವಿವರಗಳನ್ನು ಜನತೆಗೆ ತಿಳಿಸಿದರು.

ತಿಪಟೂರಿನಲ್ಲಿ ೧೯೩೧ರಲ್ಲಿ ಕೆ.ಎನ್.ರಂಗಪ್ಪ, ಎಲ್. ಸಿದ್ಧಪ್ಪನವರ ನೇತೃತ್ವದಲ್ಲಿ ತಿಪಟೂರಿನಲ್ಲಿ ವಿದೇಶಿ ಬಟ್ಟೆ ಮಾರುತ್ತಿದ್ದ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದ ಕಾರ್ಯಕರ್ತರು ವಿದೇಶಿ ಬಟ್ಟೆಗಳ ದಹನ ಕಾರ್ಯ ನಡೆಸಿದರು. ತಾಳಕೆರೆ ಸುಬ್ರಹ್ಮಣ್ಯ ಅವರ ಅಧ್ಯಕ್ಷತೆಯಲ್ಲಿ ೧೯೩೧ರಲ್ಲಿ ಅಸ್ತಿತ್ವಕ್ಕೆ ಬಂದ ಗ್ರಾಮಸೇವಕ ಸಂಘ ತುಮಕೂರು ಮತ್ತು ಕಡಬಗಳಲ್ಲಿ ಖಾದಿ ಉತ್ಪಾದನಾ ಕೇಂದ್ರಗಳನ್ನು ತೆರೆದರು.

ಪಾನನಿರೋಧ ಚಳವಳಿ ೧೯೩೦ರಲ್ಲಿ ಮಹಾತ್ಮ ಗಾಂಧೀಜಿಯವರು ನಾಗರಿಕ ಕಾನೂನು ಭಂಗ ಚಳುವಳಿಗೆ ನೀಡಿದ ಕರೆಯ ಅನ್ವಯ ಪ್ರಾರಂಭವಾಯಿತು. ಪಾನನಿರೋಧ ಚಳುವಳಿಯನ್ನು ಕೆ. ರಂಗಯ್ಯಂಗಾರ್, ಎಂ. ನೀಲಕಂಠರಾವ್, ತಾಳಕೆರೆ ಸುಬ್ರಹ್ಮಣ್ಯ, ಬಿ.ಸಿ. ನಂಜುಂಡಯ್ಯ, ಎಂ.ವಿ. ರಾಮರಾವ್ ಮೊದಲಾದವರ ನಾಯಕತ್ವದಲ್ಲಿ ೧೯೩೧ ಸೆಪ್ಟಂಬರ್ ೧೩ ರಂದು ಪ್ರಾರಂಭವಾಯಿತು.

ತುಮಕೂರು ನಗರದಲ್ಲಿ ಗೋಲಿಬಾರ್ ಆಗಿ ಹುತಾತ್ಮರಾದವರು ಜಿ. ಆರ್. ರಾಮಚಂದ್ರ, ವಿದ್ಯಾರ್ಥಿ (ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಮಗ), ಶ್ರೀ ನಂಜುಂಡಪ್ಪ, ತುಮಕೂರು (ಮುನಿಸ್ವಾಮಯ್ಯನವರ ಮಗ) ಗಂಗಪ್ಪ ತುಮಕೂರು, ಮಹಿಳೆಯರಲ್ಲಿ ಕಾರಾಗೃಹ ವಾಸ ಅನುಭವಿಸಿ ದಾರುಣ ಶಿಕ್ಷೆಗೆ ಒಳಗಾದವರಲ್ಲಿ ಮೊದಲಿಗರು ಶ್ರೀಮತಿ ಜಿ.ಸಿ.ಬಾಗೀರಥಮ್ಮ, ಮಾಜಿ ವಿಧಾನಸಭಾ ಸದಸ್ಯರು ಸ್ವಾತಂತ್ರ್ಯ ಹೋರಾಟಗಾರ ಜಿ. ಆರ್. ಚಂಗಲಾರಾಧ್ಯರ ಧರ್ಮಪತ್ನಿ.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಂ. ಎನ್. ಜೋಯಿಸ್ ಅವರು ತುಮಕೂರು ಚಲೇಜಾವ್ ಚಳವಳಿಯ ಸಂಚಿಕೆಯಲ್ಲಿ ಈ ಮಾತುಗಳನ್ನು ಬರೆದಿದ್ದಾರೆ– "ಗಾಂಧೀಜಿಯವರು ಭಾರತದ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರಮಟ್ಟದಲ್ಲಿ ಮೂರು ಚಳವಳಿಗಳನ್ನು ನಡೆಸಿದರು....ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮಾರ್ಗದರ್ಶನವನ್ನು ರಾಷ್ಟ್ರ ನಾಯಕರು ಮಾಡಲು ಸಾಧ್ಯವಾಗಲಿಲ್ಲ. ಒಬ್ಬೊಬ್ಬ ಚಳವಳಿಗಾರನೂ ಯಾವ ಕಾರ್ಯಕ್ರಮದಿಂದ ಬ್ರಿಟಿಷರು ಸರ್ಕಾರ ನಡೆಸಲು ತೊಂದರೆ ಆಗುತ್ತಿತ್ತೋ ಅದನ್ನು ರೂಪಿಸಿ ಕೊಂಡು ಚಳವಳಿಯನ್ನು ಮುಂದುವರೆಸಿದರು. ಆದ್ದರಿಂದ ಚಳವಳಿಗಾರರೇ ನಾಯಕರು ಮತ್ತು ಕಾರ್ಯಕರ್ತರೂ ಆದರು. ರೈಲುಗಳ ಸಂಚಾರಕ್ಕೆ ಅಡ್ಡಿ, ಟಪಾಲು ಮತ್ತು ತಂತಿ ಇಲಾಖೆಗಳ ಕಾರ್ಯಕ್ಕೆ ಅಡ್ಡಿ, ಆಗ ನಡೆಯುತ್ತಿದ್ದ ಯುದ್ಧಕ್ಕೆ ಸರಬರಾಜಾಗುತ್ತಿದ್ದ ಪದಾರ್ಥಗಳ ಪೂರೈಕೆಗೆ ಅಡ್ಡಿ ಇವೆ ಮೊದಲಾದ ಕಾರ್ಯಕ್ರಮಗಳು ನಡೆದವು. ಹಿಂದೂಸ್ಥಾನದ ಸೈನಿಕರು ಮತ್ತು ನಾವಿಕರು ಈ ಚಳುವಳಿಯಲ್ಲಿ ಭಾಗವಹಿಸಿದ್ದು ಒಂದು ವಿಶೇಷ. ಈ ಚಳವಳಿಯಲ್ಲಿ



ಭಾಗವಹಿಸಿ ತಮ್ಮ ಪುರೋಭಿವೃದ್ಧಿಯನ್ನು ಹಾಳು ಮಾಡಿಕೊಂಡ ಯುವಕರ ಸಂಖ್ಯೆ ಗೊತ್ತಿಲ್ಲ. ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಸಂಸಾರವನ್ನು ಬೂದಿ ಮಾಡಿಕೊಂಡವರ ಲೆಕ್ಕ ಯಾರೂ ಇಟ್ಟಿಲ್ಲ. ಗುಂಡಿನೇಟಿಗೆ ಬಲಿಯಾದವರ ಲೆಕ್ಕ ಸಿಕ್ಕಿಲ್ಲ. ನೇಣು ಕಂಬಕ್ಕೆ ಕುತ್ತಿಗೆ ಕೊಟ್ಟ ಹುತಾತ್ಮರು ಅದೆಷ್ಟೋ ಮಂದಿ ಹೀಗೆ ತ್ಯಾಗ ಬಲಿದಾನಗಳಿಂದ ಭಾರತ ಸ್ವಾತಂತ್ರ್ಯ ಪಡೆಯಿತು.

ಹಿರಿಯ ಹೋರಾಟಗಾರ ಚಿಕ್ಕನಾಯಕನಹಳ್ಳಿಯ ಎಂ.ಎನ್. ಹನುಮಂತರಾವ್ ಸ್ವಾತಂತ್ರ್ಯ ಹೋರಾಟದ ನೆನಪುಗಳು ಲೇಖನದಲ್ಲಿ.... ೧೯೪೧–೪೨ರ ಕ್ವಿಟ್ ಇಂಡಿಯಾ ಚಳವಳಿಯ ಮುಂಬಯಿ ಅಧಿವೇಶನದಲ್ಲಿ ಭಾಗಿಗಳಾಗಿ ಬರುವ ದಾರಿಯಲ್ಲಿ ಎಂ.ವಿ.ರಾಮರಾವ್, ಸುಬ್ರಹ್ಮಣ್ಯಂ, ನೀಲಕಂಠರಾವ್ ಮುಂತಾದವರ ಬಂಧನವಾಯಿತು. ಗಾಂಧೀಜಿಯವರ ಬಂಧನದ ಸುದ್ದಿ ಹಬ್ಬುತ್ತಿದ್ದಂತೆ ವಿದ್ಯಾರ್ಥಿಗಳು, ಕಾರ್ಮಿಕರು ತಮಗೆ ತಿಳಿದ ರೀತಿಯಲ್ಲಿ ಚಳುವಳಿ ಮುಂದುವರೆಸಿದರು. ಆರ್. ಎಸ್. ಆರಾಧ್ಯ ಅವರು ಭೂಗತರಾಗಿ ಅನೇಕ ಕೈಬರೆಹದ ಪತ್ರಿಕೆಗಳನ್ನು ತಯಾರಿಸಿ ಹಂಚುತ್ತಿದ್ದರು. ಕ್ಯಾತಸಂದ್ರದಲ್ಲಿ ರೈಲ್ವೆ ಇಂಜಿನ್ ಉರುಳಿಸ ಲಾಯಿತು. ಅನೇಕ ಹೆಂಡದ ಲಾರಿಗಳನ್ನು ಸುಡಲಾಯಿತು. ತಿಪಟೂರು ರೈಲ್ವೆ ಸ್ಟೇಷನ್ ಸುಟ್ಟು ಹಾಕಿ ಗೌಡನ್ ಅನ್ನು ಲೂಟಿ ಮಾಡಲಾಯಿತು ಮತ್ತು ಫೈರಿಂಗ್ ಆಗಿ ನೂರಾರು ಜನರನ್ನು ಬಂಧಿಸಲಾಯಿತು. ತುಮಕೂರಿನಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ನುಗ್ಗಿ ಜಡ್ಜ್ ಪೀಠದಲ್ಲಿ ಕುಳಿತು ಕೇಸ್ ಸಹ ಕೂಗಿಸಿದ ಕೆಚ್ಚೆದೆಯ ಟಿ. ಸಿ. ಕೃಷ್ಣಪ್ಪನವರ ಹೆಸರು ಮರೆಯಲಾಗ ದಂತಹದು. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಗುಬ್ಬಿ ಎನ್. ಚನ್ನಬಸಪ್ಪನವರ ಬಂಧನವಾಯಿತು. ರೈಲ್ವೆ ಹಳಿ ಕೀಳುವುದು, ಟೆಲಿಫೋನ್ ತಂತಿ ಕೀಳುವುದು ಮುಂತಾದ ಚಳವಳಿ ಸಾಕಷ್ಟು ನಡೆದು ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿತ್ತು.

ತುಮಕೂರಿನ ಗಣ್ಯರಾದ ಡಾ. ಟಿ. ಎಸ್. ಮಲ್ಲಿಕಾರ್ಜುನಯ್ಯನವರು ಬರೆದ "ತುಮಕೂರಿನಲ್ಲಿ ೧೯೪೨ರಲ್ಲಿ ನಡೆದ ಸ್ವಾತಂತ್ರ್ಯ ಸಮರ" ಲೇಖನದಲ್ಲಿ ಅಂದಿನ ದಿನದ ಹೋರಾಟವನ್ನು ಸವಿವರವಾಗಿ ದಾಖಲಿಸಿದ್ದಾರೆ. ಶವದ ಪೆಟ್ಟಿಗೆ ಮೆರವಣಿಗೆ, ಅದರಲ್ಲಿ ಬ್ರಿಟಿಷರ ಯೂನಿಯನ್ ಜಾಕ್ ಬಾವುಟ

ಇಟ್ಟದ್ದು ತದನಂತರ ದಹನ ಎಂತಹ ಅಪಾಯಕಾರಿಯಾದ ಘಟನೆ. ಅಂದಿಗೆ ಬ್ರಿಟಿಷ್‌ರ ಆಡಳಿತದಲ್ಲಿ ನ್ಯಾಯವನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ. ಯುವಶಕ್ತಿಯ ಹೋರಾಟ ಇಂದಿಗೂ ಮೈನವಿರೇಳಿಸುವಂತಹದು. ಡಾ. ಟಿ. ಎಸ್. ಮಲ್ಲಿಕಾರ್ಜುನಯ್ಯನವರ ಜೊತೆ ತ.ರಾ.ಸು. ಅವರು ಇದದ್ದು ಅಂದಿಗೆ ತ.ರಾ.ಸು. ಅವರಿಗೆ ಪ್ರತಿನಿತ್ಯ ನಾಲ್ಕು ಆರ್ಯಮಾರ್ಕಿನ ಸಿಗರೇಟ್ ಪ್ಯಾಕ್ ಕೊಡುತ್ತಾ ಇದದ್ದು "ಡಂಗೂರ" ಪತ್ರಿಕೆಗೆ ತ.ರಾ.ಸು. ರವರು ಲೇಖನಗಳನ್ನು ಜೈಲಿನಲ್ಲಿ ಬರೆಯುತ್ತಿದ್ದದ್ದು, ಈ ಲೇಖನದಲ್ಲಿ ದಾಖಲಾಗಿದೆ. ಕಾರಾಗೃಹದಲ್ಲಿ ವಿದ್ಯಾರ್ಥಿಗಳಿಗೆ ಊಟ ತಿಂಡಿ ವ್ಯವಸ್ಥೆಯನ್ನು ಮಾಡಿದವರು ನರಸಿಂಹಯ್ಯನವರು. ಜೈಲಿನಲ್ಲಿ ರಾಜಕೀಯ ಕೈದಿಗಳಾಗಿದ್ದ ವಿದ್ಯಾರ್ಥಿಗಳು ಕೇಳಿದ ಊಟ ತಿಂಡಿಯನ್ನು ಮಾಡಿಕೊಟ್ಟದ್ದನ್ನು ಮಲ್ಲಿಕಾರ್ಜುನಯ್ಯನವರು ಸ್ಮರಿಸಿಕೊಂಡಿದ್ದಾರೆ. ಅಂದಿನ ದಿನಮಾನದಲ್ಲಿ ಪ್ರತಿಯೊಬ್ಬರು ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿದ್ದಾರೆ.

ಅಂದಿನ ದಿನಗಳಲ್ಲಿ ಹೆಂಡವನ್ನು ಕತ್ತೆಗಳ ಮೇಲೆ ಚರ್ಮದ ಚೀಲದಲ್ಲಿ ಸಂಗ್ರಹಿಸಿಕೊಂಡು ಬರುತ್ತಿದ್ದರು. ಇಂತಹ ಒಂದು ಭಿತ್ತಿ ಚಿತ್ರ ಸೀಬಿ ನರಸಿಂಹ ಸ್ವಾಮಿ ದೇವಸ್ಥಾನದ ಗೋಡೆ ಮೇಲೆ ಇದೆ. ಇಂತಹ ಚೀಲಗಳನ್ನು ತಿವಿದು, ಹೆಂಡ ಸೋರುವಂತೆ ಮಾಡುವ ಕೆಲಸವನ್ನು ಯುವಕರು ಮಾಡುತ್ತಿದ್ದರು. ಕಾಂಗ್ರೆಸ್ ಕಾರ್ಯಕರ್ತರು ಮದುವೆ ಮಾಡಿಕೊಳ್ಳುವ ಸಂದರ್ಭದಲ್ಲಿ ಕಾಂಗ್ರೆಸ್ ಧ್ವಜದಡಿ ರಾಟೆಯನ್ನು ಪೂಜಿಸಿ ಮಾಂಗಲ್ಯ ಧಾರಣೆ ಮಾಡಿಕೊಳ್ಳುತ್ತಿದ್ದರು ಎಂಬುದು ವಿಶೇಷ ಸಂಗತಿಯಾಗಿದೆ. ಮಾಂಗಲ್ಯದ ಮೇಲೆ ಭಾರತ ದೇಶದ ನಕ್ಷೆಯನ್ನು ಬಿಡಿಸಿ ಅದನ್ನು ಯುವಕರು ಕಟ್ಟುವ ರೂಢಿ ತುಮಕೂರು ಜಿಲ್ಲೆಯಲ್ಲಿತ್ತು. ಈ ಕುರಿತು ಬೆಂಗಳೂರು ನಗರದ ಶಾಸಕಿಯಾಗಿದ್ದ ನಾಗರತ್ನಮ್ಮ ಹಿರೇಮಠ ಅವರ ಯಜಮಾನ ರಾಜಶೇಖರಯ್ಯ ಹಿರೇಮಠರು "ದೇಶಭಕ್ತಿ ಮದುವೆ" ಬಗ್ಗೆ ಒಂದು ಕಿರು ಪುಸ್ತಕ ಬರೆದಿದ್ದರು. ಈ ಗ್ರಂಥವನ್ನು ನಾನು ಗಮನಿಸಿದ್ದೆ. ಗಂಡು ಹೆಣ್ಣು ಇಬ್ಬರೂ ಖಾದಿ ಹಾರ, ಖಾದಿ ಬಟ್ಟೆ ಧರಿಸಿ ಭಾರತ ಮಾತೆಯ ನಕ್ಷೆಗೆ ಪೂಜೆ ತ್ರಿವರ್ಣ ಧ್ವಜಕ್ಕೆ ಪೂಜೆ ನಂತರ ಪ್ರತಿಜ್ಞಾ ವಿಧಿ ಬೋಧನೆ ನಂತರ ಮಾಂಗಲ್ಯ ಧಾರಣ ಇಂತಹ ಮದುವೆ ನಡೆದ



ದಾಖಲೆ ಈ ಕೃತಿಯಲ್ಲಿದೆ. ರಾಜಶೇಖರಯ್ಯ ಹಿರೇಮಠ ಅವರು ಮೂಲತಃ ಪಾವಗಡ ತಾಲೂಕಿನ ಅರಸಿಕೇರಿಯವರು.

"ತುಮಕೂರಿನ ವೀರವನಿತೆಯರು" ತುರುವೇಕೆರೆ ಪುಟ್ಟರಂಗಪ್ಪನವರ ಪುಸ್ತಕದಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ತುಮಕೂರು ಜಿಲ್ಲೆಯ ಮಹಿಳೆಯರ ಪಾತ್ರ ಎಂಬ ಶೀರ್ಷಿಕೆ ಅಡಿಯಲ್ಲಿ ಸಾಕಷ್ಟು ವಿವರವಾದ ಮಾಹಿತಿಯನ್ನು ನೀಡಿದ್ದಾರೆ. ೨೦೨೧ರಲ್ಲಿ ಪ್ರಕಟವಾದ ಈ ಪುಸ್ತಕದಲ್ಲಿ ಶ್ರೀಮತಿ ಜಿ.ಸಿ. ಭಾಗೀರಥಮ್ಮ, ಶ್ರೀಮತಿ ಸುಶೀಲಾ ಸುಬ್ರಹ್ಮಣ್ಯ, ಶ್ರೀಮತಿ ಸುಲೋಚನಾದೇವಿ ಆರಾಧ್ಯ, ಶ್ರೀಮತಿ ಚಿನಕವಜ್ರದ ಲಕ್ಷ್ಮಮ್ಮ, ಬಾಲ ಹೋರಾಟಗಾರ್ತಿ ಟಿ.ಎಸ್. ನಾಗರತ್ನ ಅವರ ಬಗ್ಗೆ ವಿವರವಾದ ಮಾಹಿತಿ ಇದೆ.

ನಾನು ಶ್ರೀಮತಿ ಜಿ.ಸಿ. ಭಾಗೀರಥಮ್ಮನವರನ್ನು ಮತ್ತು ಶ್ರೀಮತಿ ಸುಲೋಚನಾದೇವಿ ಆರಾಧ್ಯರವರನ್ನು ವೈಯಕ್ತಿಕವಾಗಿ ಬಲ್ಲೆ. ಸುಲೋಚನಾ ದೇವಿ ಅವರ ತಾತ ಬಾಗಲಕೋಟೆಯ ಜಂಗಿನ ಮುರಿಗಯ್ಯನವರು. ಅವರಿಗೆ ತುಮಕೂರಿನ ಬಿ. ಶಿವಮೂರ್ತಿಶಾಸ್ತ್ರಿಗಳು ಪರಮಮಿತ್ರರು. ಆ ಕಾರಣದಿಂದ ಕರ್ನಾಟಕ ಏಕೀಕರಣವಾಗಬೇಕು. ಏಕೀಕರಣ ಅಂದರೆ ಉತ್ತರ ಕರ್ನಾಟಕದ ಹೆಣ್ಣನ್ನು ದಕ್ಷಿಣ ಕರ್ನಾಟಕದವರು ಮಾಡಿಕೊಂಡರೆ ಏಕೀಕರಣವಾಗುತ್ತದೆ ಎಂದು ಈ ವಿವಾಹ ಮಾಡಿಸಿದರಂತೆ.

ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರದ ಹಾಗೂ ನಮ್ಮ ರಾಜ್ಯದ ಹೋರಾಟಗಾರ್ತಿಯರ ಸಾಲಿನಲ್ಲಿ ತುಮಕೂರು ಜಿಲ್ಲೆಯ ಅನೇಕ ಮಹಿಳೆಯರು ಕೂಡ ಇದ್ದರೆಂಬುದು ನಮಗೆ ಹೆಮ್ಮೆಯ ಸಂಗತಿ. ಈ ವೀರವನಿತೆಯರಲ್ಲಿ ಉತ್ತರ ಕನ್ನಡ ಭಾಗದಲ್ಲಿ ನಡೆದ ನಾಗರಿಕ ಕಾನೂನು ಭಂಗ ಚಳವಳಿಯ ಅಂಗವಾಗಿ ಕಾರವಾರದಲ್ಲಿ ಕರ ನಿರಾಕರಣ ಚಳವಳಿ ಆರಂಭವಾದಾಗ ತುಮಕೂರಿನಲ್ಲಿ ಆರ್. ಎಸ್. ಆರಾಧ್ಯರು ಗುಪ್ತವಾಗಿ ಮುದ್ರಿಸುತ್ತಿದ್ದ ತ್ರಿಶೂಲ, ಕ್ರಾಂತಿ, ಸಮರ, ಕಹಳೆ ಮೊದಲಾದ ಕಲ್ಲಚ್ಚು ಪತ್ರಿಕೆಗಳು ಮತ್ತು ಬುಲೆಟಿನ್‌ಗಳನ್ನು ತೆಗೆದುಕೊಂಡು ಪತಿ ವೆಂಕಟರಾಮಯ್ಯ ನವರೊಡನೆ ಗುಪ್ತವಾಗಿ ಹೋಗಿ ಕಾರವಾರಕ್ಕೆ ತಲುಪಿಸುತ್ತಿದ್ದರಲ್ಲದೆ, ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ

ಶ್ರೀಮತಿ ಗೌರಮ್ಮ ವೆಂಕಟ ರಾಮಯ್ಯನವರು ಕರ್ನಾಟಕದಲ್ಲಿ ಕರನಿರಾಕರಣೆ ಚಳವಳಿ ನಾಯಕರಲ್ಲೊಬ್ಬರಾಗಿದ್ದರು. ಇದು ಯಶಸ್ವಿಯಾಗಲು ಇವರ ತ್ಯಾಗ ಮತ್ತು ಸಾಹಸಗಳು ಕೂಡ ಪ್ರಮುಖ ಕಾರಣವಾಗಿದ್ದು ಸೇವಾದಳದ ಶಿಬಿರಕ್ಕೆ ಸೇರಿ ತರಬೇತಿ ಪಡೆದ ನಂತರ ಸಾಹಸ ಚಟುವಟಿಕೆಗಳಲ್ಲಿ ಭಾಗವಹಿಸಲು ಧೈರ್ಯ ಪಡೆದ ಈ ವೀರವನಿತೆಯ ಧೈರ್ಯ, ಸಾಹಸ, ತ್ಯಾಗಜೀವನ ಹಾಗೂ ದೇಶಪ್ರೇಮಗಳು ಅನೇಕ ಮಹಿಳೆಯರಿಗೆ ಪ್ರೇರಣೆಯಾಗಿ ನಂತರದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಹೆಚ್ಚು ಹೆಚ್ಚು ಪಾಲ್ಗೊಳ್ಳಲು ಸ್ಫೂರ್ತಿನೀಡಿದವು.

ನಂತರ ಜಿಲ್ಲೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳು ಆರಂಭವಾದಾಗ ಖಾದಿ ಉತ್ಪಾದನಾ ಕೇಂದ್ರದಲ್ಲಿ ಚರಕ ತರಗತಿಗಳನ್ನು ಆರಂಭಿಸುವ ಮೂಲಕ ಜಿಲ್ಲೆಯ ಸಾರ್ವಜನಿಕರಿಗೆ ನೂಲುವ ತರಬೇತಿ ನೀಡಿದ ಮಹಿಳಾ ಸ್ವಯಂಸೇವಕಿ ಬಿ. ಕಾಮಾಕ್ಷಮ್ಮ, ಗಾಂಧೀಜಿಯವರ ರಾಷ್ಟ್ರೀಯ ಶಿಕ್ಷಣ ಅಭಿಯಾನದಡಿ ಹಿಂದಿ ಪ್ರಚಾರಕ್ಕಾಗಿ ೧೯೪೫ರ ಅಕ್ಟೋಬರ್ ತಿಂಗಳಿನಲ್ಲಿ ಬಿ.ಸಿ.ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ತುಮಕೂರಿನಲ್ಲಿ ಸ್ಥಾಪಿತವಾದ ಹಿಂದಿ ಪ್ರಚಾರ ಸಮಿತಿ ಮಹಿಳಾ ಸದಸ್ಯೆಯಾಗಿ ಜಿಲ್ಲೆಯಾದ್ಯಂತ ಹಿಂದಿ ಪ್ರಚಾರ ಮಾಡಿದ ಕೆ. ಲಲಿತಾಂಬರವರು ತಮ್ಮದೇ ರೀತಿಯಲ್ಲಿ ಸ್ವಾತಂತ್ರ್ಯ ಚಳವಳಿಗೆ ಕಾಣಿಕೆ ನೀಡಿದರು.

ಬ್ರಿಟಿಷರ ವಿರುದ್ಧ ಭಾರತೀಯರು ನಡೆಸಿದ ನಿರ್ಣಾಯಕ ಹೋರಾಟವಾದ ೧೯೪೨ರ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ತುಮಕೂರು ಜಿಲ್ಲೆಯ ನೂರಾರು ಮಹಿಳೆಯರು ಸಕ್ರಿಯವಾಗಿ ಭಾಗವಹಿಸಿದುದು ಅತ್ಯಂತ ಸ್ಮರಣಾರ್ಹ, ಬೆಂಗಳೂರಿನ ಮಹಾರಾಣಿ ಕಾಲೇಜಿನ ವಿದ್ಯಾರ್ಥಿ ನಾಯಕಿಯರಾದ ಪೊನ್ನಮ್ಮ, ಮೀನಾಕ್ಷಮ್ಮ ಮತ್ತು ಕೋಮಲ ಎಂಬ ವಿದ್ಯಾರ್ಥಿನಿಯರು ತುಮಕೂರಿಗೆ ಬಂದು ಸಾರ್ವಜನಿಕರಿಗೆ ಕರೆ ನೀಡುವ ಮೂಲಕ ದೇಶಾಭಿಮಾನಿಗಳ ಸಭೆಯೊಂದನ್ನು ನಡೆಸಿದರು. ಇವರ ಚಟುವಟಿಕೆಗಳಿಂದ ಪ್ರೇರಿತರಾದ ತುಮಕೂರಿನ ಸರೋಜಮ್ಮ ಮತ್ತು ಅಮೃತಾಬಾಯಿ ಕೂಡಲೇ ಸಕ್ರಿಯರಾಗಿ ತುಮಕೂರಿನ ಕಾಲೇಜು ವಿದ್ಯಾರ್ಥಿನಿಯರನ್ನು ಸಂಘಟಿಸಿ ೧೯೪೨ರ ಆಗಸ್ಟ್ ೩೧ ರಂದು ವಿದ್ಯಾರ್ಥಿಗಳದೇ ಆದ ಒಂದು ಬೃಹತ್ ಸಭೆ ನಡೆಸಿದರು. ವಿದ್ಯಾರ್ಥಿಗಳ ಸಂಘಟನೆಯಿಂದ ಹೆದರಿ ವಿಚಲಿತವಾದ ಜಿಲ್ಲಾಡಳಿತ ಮಕ್ಕಳನ್ನು ಶಾಲಾ ಕಾಲೇಜುಗಳಿಗೆ ಕಡ್ಡಾಯವಾಗಿ ಹಾಜರಾಗುವಂತೆ ನೋಡಿಕೊಳ್ಳಬೇಕೆಂದು ಎಲ್ಲ ಸರ್ಕಾರಿ ಅಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸಿತು. ಆದರೂ ಪ್ರಯೋಜನವೇನೂ ಆಗಲಿಲ್ಲ. ಚಳವಳಿ ಮುಂದುವರಿಯಿತು.

ಈ ನಡುವೆ ೧೯೪೨ ಆಗಸ್ಟ್ ೧೮ರಂದೇ ತನ್ನ ನೇತೃತ್ವದಲ್ಲಿ ತುಮಕೂರಿನಲ್ಲಿ ಮಹಿಳೆಯರದೇ ಆತ ಪ್ರತ್ಯೇಕ ಪ್ರತಿಭಟನಾ ಮೆರವಣಿಗೆಯೊಂದನ್ನು ನಡೆಸಿ, ಅದೇ ದಿನ ಸಂಜೆ ೨೫೦ ಮಹಿಳೆಯರನ್ನೂ ಒಳಗೊಂಡಂತೆ ಬೃಹತ್ ಸಂಖ್ಯೆಯ ಚಳವಳಿಗಾರರನ್ನು ಸಂಘಟಿಸಿ ಸಾರ್ವಜನಿಕ ಪ್ರತಿಭಟನಾ ಸಭೆಯೊಂದನ್ನು ಆಯೋಜಿಸುವ ಮೂಲಕ ಶ್ರೀಮತಿ ಶೇಷಮ್ಮ ಸುಬ್ರಹ್ಮಣ್ಯ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಿದರೆ ೧೯೪೨ರ ಕ್ವಿಟ್ ಇಂಡಿಯಾ ಮತ್ತು ೧೯೪೭ರ ಮೈಸೂರು ಚಲೋ ಚಳವಳಿಗಳೆರಡರಲ್ಲೂ ನಾಯಕತ್ವ ವಹಿಸಿ ಮಹಿಳೆಯರನ್ನು ಸಂಘಟಿಸಿ ಚಳವಳಿ ನಡೆಸಿದ ಜಿ.ಸಿ. ಭಾಗೀರಥಮ್ಮ ಮತ್ತು ಸುಶೀಲಾ ಸುಬ್ರಹ್ಮಣ್ಯರವರು ಮೈಸೂರು ಚಲೋ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ ಸುಲೋಚನಾದೇವಿ ಆರಾಧ್ಯ. ಚಿನಕವಜ್ರದ ಲಕ್ಷ್ಮಮ್ಮ, ಅಮೃತಾಬಾಯಿ, ಸರೋಜಮ್ಮ, ಕೋಮಲ, ಮೀನಾಕ್ಷಮ್ಮ, ಪೊನ್ನಮ್ಮ, ಕುಂತಲಾ ಸೆಟ್ಟರಾವ್, ನರಸಮ್ಮ ಮತ್ತು ಚಿಕ್ಕಮ್ಮ ಪೊಲೀಸರ ಲಾಠಿ ಏಟಿಗೂ ಹೆದರದೆ ಚಿಕ್ಕನಾಯಕನಹಳ್ಳಿಯ ತಾಲೂಕು ಕಚೇರಿ ಮೇಲೆ ರಾಷ್ಟ್ರಧ್ವಜ ಹಾರಿಸಿದ ಅನ್ನಪೂರ್ಣಮ್ಮ, ಗೌರಮ್ಮ, ಭಾಗ್ಯಮ್ಮ, ನಾಗಮ್ಮ ಮುಂತಾದವರು ತುಮಕೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರ್ತಿಯರಲ್ಲಿ ಪ್ರಮುಖರಾದ ವರಾಗಿದ್ದು, ಇವರು ಚಳವಳಿಯ ಸಂದರ್ಭದಲ್ಲಿ ಜನರನ್ನು ಸಂಘಟಿಸಿ ಪ್ರತಿಭಟನಾ ಸಭೆ ಮತ್ತು ಮೆರವಣಿಗೆಗಳನ್ನು ನಡೆಸಿದರಲ್ಲದೆ, ಮದ್ಯದಂಗಡಿಗಳ ಮೇಲೆ ದಾಳಿ ಮಾಡುವ ಮೂಲಕ, ಸರ್ಕಾರಿ ಕಚೇರಿಗಳು ಮತ್ತು ನ್ಯಾಯಾಲಯಗಳ ಮುಂದೆ ಪಿಕೆಟಿಂಗ್ ನಡೆಸುವ ಮೂಲಕ ಚಳವಳಿಯನ್ನು ನಿರಂತರವಾಗಿ ಮುಂದುವರಿಸಿಕೊಂಡು ಬರುವುದರೊಂದಿಗೆ ರಾಷ್ಟ್ರದ ಸ್ವಾತಂತ್ರ್ಯ ಗಳಿಕೆಗೆ ಅತ್ಯಮೂಲ್ಯ ಕೊಡುಗೆ ನೀಡಿದ್ದಾರೆ.

ಇದು ತುಮಕೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಸಂಕ್ಷಿಪ್ತ ಕಥನ. ಈ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ ಮಾಡಿದ ಮಹನೀಯರ ಸಂಖ್ಯೆ ಸಾವಿರಾರು. ಅವರೆಲ್ಲರ ಹೆಸರುಗಳನ್ನು ತೆಗೆದುಕೊಳ್ಳುವುದು ತುಂಬಾ ಕಷ್ಟದ ಕೆಲಸ. ಆದ್ದರಿಂದ ಪ್ರಸ್ತುತ ಕೃತಿಯಲ್ಲಿ ಪ್ರಮುಖ ಹೋರಾಟದ ಹೆಜ್ಜೆಗಳನ್ನು ಮಾತ್ರ ಇಲ್ಲಿ ಗುರುತಿಸುವ ಪ್ರಯತ್ನ ಮಾಡಿರುವೆ.

❖

## ಪರಾಮರ್ಶನ ಗ್ರಂಥಗಳು

೧. ಗಾಂಧಿ ಮಹಾತ್ಮರ ತತ್ವಬೋಧೆ
ಬಿ. ಶಿವಮೂರ್ತಿಶಾಸ್ತ್ರಿ ತುಮಕೂರು, ೧೯೨೭

೨. ಗಾಂಧೀ ಮತ್ತು ಕರ್ನಾಟಕ
ಸಂ: ಸಿದ್ದವ್ವನಹಳ್ಳಿ ಕೃಷ್ಣಶರ್ಮ, ಬೆಂಗಳೂರು, ೧೯೬೯

೩. ಜೀವನ ಸ್ಮೃತಿಗಳು
ಬಿ. ಶಿವಮೂರ್ತಿಶಾಸ್ತ್ರಿಗಳು, ಬೆಂಗಳೂರು, ೧೯೭೪

೪. ಗಾಂಧೀ ಸಾಹಿತ್ಯ (ಸಾರಸಂಗ್ರಹ)
ಜಿ.ವಿ. ನಾರಾಯಣಮೂರ್ತಿ, ಬೆಂಗಳೂರು, ೧೯೭೨

೫. ಬೆಂಗಳೂರಿನಲ್ಲಿ ಮಹಾತ್ಮಾ ಗಾಂಧೀ
ವೇಮಗಲ್ ಸೋಮಶೇಖರ್, ಬೆಂಗಳೂರು, ೨೦೦೪

೬. ಗಾಂಧೀಜಿ ಸಂದರ್ಶನ (ಲೇಖನ)
ಬಿ. ಶಿವಮೂರ್ತಿ ಶಾಸ್ತ್ರಿ ಪ್ರಬುದ್ಧ ಕರ್ನಾಟಕ ಸಂ.೫೧, ಸಂಚಿಕೆ ೫೧, ಗಾಂಧೀ ಸಂಚಿಕೆ, ಮೈಸೂರು ವಿಶ್ವವಿದ್ಯಾಲಯ, ೧೯೭೧

೭. ಶರಣರು ಕೈಕೊಂಡ ಅಸ್ಪೃಶ್ಯೋದ್ಧಾರ ಕಾರ್ಯ
ಸಂ: ಜೀರಗೆ ಕಟ್ಟೆ ಬಸವಪ್ಪ, ಎಸ್. ಆರ್. ಮಲ್ಲಪ್ಪ ತಿಪಟೂರು ೧೯೪೮

೮. ಚಲೇಜಾವ್ ಚಳವಳಿ ೫೦ನೇ ವಾರ್ಷಿಕೋತ್ಸವ ಸಂಚಿಕೆ
ತುಮಕೂರು, ೧೯೯೨

೯. ತುಮಕೂರಿನ ವೀರವನಿತೆಯರು
ಕೆ. ಪುಟ್ಟರಂಗಪ್ಪ, ತುರುವೇಕೆರೆ

೧೦. ವೀರಪಥ ತುರುವೇಕೆರೆ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರ ವೀರಕಥನ ಲೇಖಕರು: ಕೆ. ಪುಟ್ಟರಂಗಪ್ಪ, ೨೦೨೧

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |